ಸಂಪಾದಕರು :
ಎಂ.ಎಸ್. ವಿಕಾಸ್

ಭಾನುವಾರ, ಏಪ್ರಿಲ್ 14, 2024
ದಾವಣಗೆರೆ, ಪುಟ : 8 ರೂ : 5
ಸಂಪುಟ : 50 ಸಂಚಿಕೆ : 333 RNI : 27369/75


# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ


50 1974 2023
janathavani@mac.com
www.janathavani.com
08192 254736 91642 99999



# SMT. PUSHPA SHAMANUR MAHALINGAPPA

## CBSE / ICSE RESIDENTIAL SCHOOL, & PU SCIENCE COLLEGE DAVANGERE / BATHI

#5335, 1st Main, Swami Vivekananda Badavane, Near BIET College, Davangere - 4

## CONGRATULATIONS TO ALL OUR ACHIEVERS IN 2nd PUC RESULT - 2024

Total Students Appeared for Exam **280** | **Distinctions 153** | **500 Above 174**



**586 / 600**

| Subject | Marks |
|---|---|
| Kannada | 98 |
| English | 95 |
| Physics | 96 |
| Chemistry | 99 |
| Mathematics | 100 |
| Biology | 98 |

**BHAVANA K S**

| Subject | 100/100 |
|---|---|
| Kannada 100/100 | 09 |
| Chemistry 100/100 | 07 |
| Mathematics 100/100 | 38 |
| Biology 100/100 | 06 |
| Sanskrit 100/100 | 08 |
| Computer science 100/100 | 05 |



**584 / 600**

| Subject | Marks |
|---|---|
| Kannada | 98 |
| English | 91 |
| Physics | 97 |
| Chemistry | 100 |
| Mathematics | 100 |
| Biology | 98 |

**DEEKSHITHA J P**

| Name | Marks |
|---|---|
| SAMARTH K S | 583 |
| BHAGYASHREE PATIL | 582 |
| R P DEEKSHITHA | 582 |
| SANJANA GULED | 581 |
| SHANTANU S BHAT | 581 |
| AKSHATA | 580 |
| HARSHITHA M R | 579 |
| HARSHITHA MANVI | 579 |
| ADITHYA N T | 578 |
| RAKSHAK B | 578 |
| CHAITHRA C | 577 |
| RAKSHITHA K R | 577 |
| P SUJANA | 575 |
| AMITH KUMAR R D | 574 |
| MEGHANA B S | 574 |
| BORAMMA | 573 |
| CHETHAN H S | 573 |
| CHANNAVEERAYYA | 573 |
| POORVIKA L S | 571 |
| YASHODHA P | 571 |
| AMITH H R | 570 |
| ANANTHSHESH D | 569 |
| B G MANJULA | 569 |
| DIYALI ALUR | 569 |
| B G VIVEK | 569 |
| MANOJ | 568 |
| DARSHAN D | 567 |
| VARSHA M S | 567 |
| SANJANA Y D | 566 |
| DEEPTI A PATIL | 566 |
| MANOJ M S | 566 |
| PRAMOD SAYADATTI | 566 |
| SPOORTI P S | 566 |
| RAJESHWARI B R | 564 |
| GOUDAPPAGOUDFA | 563 |
| SAHANA M K | 563 |
| AFSA TARUNM | 563 |
| MEGHANA S K | 563 |
| PURVIKA S B | 563 |
| ABHISHTA AIHOLLI | 562 |
| SHILPA CHANNALLI | 562 |
| TEJASWINI M N | 561 |
| SANMATI I V | 560 |
| SRUSHTI P S | 559 |
| DILEEPKUMAR D H | 559 |
| MARUTI K | 558 |
| RAMYA R K | 558 |
| REVANSIDDESH M | 558 |
| ANUPAMA B H | 557 |
| YASHASWINI M G | 557 |
| MAHIMA V K | 555 |
| M NANDITHA | 555 |
| SWATI G P | 554 |
| LAXMI M | 552 |
| NIVEDITA G | 552 |
| PAVAN N J | 551 |
| SUKANYA V H | 551 |
| LASYA BS | 551 |
| MEGHARAJ B | 551 |
| SYED JAFAR | 550 |
| BINDUSHREE L N | 550 |
| SANJEEV M B | 550 |
| BHOOMIKA S P | 549 |
| LUHITA H B | 549 |
| SUSHMITA M D | 548 |
| NIKHIL S PATIL | 547 |
| PRAGATHI P H | 547 |
| ADITYA PATIL | 546 |
| BINDU S J | 546 |
| SANJAY B P | 545 |
| DAKSH KUMAR | 545 |
| MEGHA G H | 545 |
| PUNITH S | 544 |
| CHAITRA F B | 544 |
| TANU V HULLATTI | 543 |
| DARSHAN T P | 543 |
| ABHISHEK M D | 542 |
| DEEPALI KORI | 542 |
| SHIVA KUMAR | 542 |
| PRAGATHI S S | 541 |
| SYED ALIYA | 541 |
| VAISHALI M S | 540 |
| CHETHANA M M | 540 |
| VIDHYA K | 540 |
| CHETAN S H | 539 |
| SAMARTH V S | 539 |
| BHARAT | 538 |
| SAHANA | 538 |
| SHRUTI S N | 538 |
| ESHWARI T R | 538 |
| MANASA | 538 |
| RACHANA S | 538 |
| PRIYANKA B S | 537 |
| MONIKA K V | 536 |
| SAGAR R P | 536 |
| SURYA U P | 536 |
| KUSUMA N B | 535 |
| RASHI E M | 535 |
| SANJANA S S | 535 |
| ASHWATH H | 535 |

## ADMISSIONS OPEN

FOR 1ST PU & KG to IX Std ( CBSE / ICSE )

## SEPARATE HOSTEL FOR GIRLS & BOYS

BUS FACILITY FOR DAYSCHOLAR

8050222172, 8050222171 www.spsmrs.org

8970071100 / 9902009033 / 08192264696

# ಕಾಡಜ್ಜಿ ಗ್ರಾ.ಪಂ. ಅಧ್ಯಕ್ಷರಾಗಿ ಜ್ಯೋತಿ ಲಿಂಗಾನಾಯ್ಕ್ ಅವಿರೋಧ ಆಯ್ಕೆ



ದಾವಣಗೆರೆ, ಏ.13- ತಾಲ್ಲೂಕಿನ ಕಾಡಜ್ಜಿ ಗ್ರಾಮ ಪಂಚಾಯಿತಿ ನೂತನ ಅಧ್ಯಕ್ಷರಾಗಿ ಜ್ಯೋತಿ ಲಿಂಗಾನಾಯ್ಕ್ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಶ್ರೀಧರಮೂರ್ತಿ, ಗ್ರಾ.ಪಂ. ಉಪಾಧ್ಯಕ್ಷರು, ಪಿಡಿಓ ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## ನಗರದಲ್ಲಿ ಇಂದು ನಾರಾಯಣ ಹೆಲ್ತ್‌ನಿಂದ ನಾಟಕ ಸರಣಿ

ನಾರಾಯಣ ಹೆಲ್ತ್‌ನ ಎಸ್.ಎಸ್.ನಾರಾಯಣ ಸೂಪರ್ ಸ್ಪೆಷಾಲಿಟಿ ಸೆಂಟರ್ ವತಿಯಿಂದ ನಗರದಲ್ಲಿ ಇಂದು 'ಇನ್‌ಸೈಟ್‌ಇಆರ್' ಸತ್ಯ ಕಥೆಗಳಿಂದ ಸ್ಫೂರ್ತಿ ಎಂಬ ನೈಜವಾದ ತುರ್ತು ಕಥೆಗಳನ್ನೊಳಗೊಂಡ 'ಭಾರತದ ಮೊದಲ ವೈದ್ಯಕೀಯ ಡಾಕ್ಯೂ-ನಾಟಕ ಸರಣಿ'ಯನ್ನು ಇಂದು ಬೆಳಿಗ್ಗೆ 11 ಗಂಟೆಗೆ ನಗರದ ಎಸ್.ಎಸ್.ಮಾಲ್‌ನ ಮೂವಿ ಟೈಮ್ಸ್ ಇಲ್ಲಿ ಆಯೋಜಿಸಲಾಗಿದೆ.

# ಮೋಕ್ಷ ಪ್ರಾಪ್ತಿಗೆ ಭಕ್ತಿ ಮಾರ್ಗ ಅತ್ಯುತ್ತಮ : ತರಳಬಾಳು ಶ್ರೀ

ನ್ಯಾಮತಿ, ಏ. 13 - ಮೋಕ್ಷ ಪ್ರಾಪ್ತಿಗೆ ಭಕ್ತಿ ಮಾರ್ಗ ಅತ್ಯುತ್ತಮವಾದುದು. ಆದ್ದರಿಂದ, ಎಲ್ಲರೂ ಗುರು-ಹಿರಿಯರಲ್ಲಿ, ದೇವರುಗಳಲ್ಲಿ ಭಯ-ಭಕ್ತಿಯಿಂದ ನಡೆದುಕೊಳ್ಳಬೇಕು. ತನ್ಮೂಲಕ ಮೋಕ್ಷ ಹೊಂದಬೇಕು ಎಂದು ಸಿರಿಗೆರೆ ಬೃಹನ್ಮಠದ ತರಳಬಾಳು ಜಗದ್ಗುರುಗಳಾದ ಡಾ.ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ ಹೇಳಿದರು.




ಶ್ರೀ ವೀರಭದ್ರೇಶ್ವರ ಸ್ವಾಮಿ ಹಾಗೂ ಶ್ರೀ ಈಶ್ವರ ಸ್ವಾಮಿ ದೇವಾಲಯಗಳ ಕಳಸಾರೋಹಣದ ಪ್ರಯುಕ್ತ ನ್ಯಾಮತಿ ತಾಲ್ಲೂಕಿನ ಚೀಲೂರು ಗ್ರಾಮದಲ್ಲಿ ಇಂದು ನಡೆದ ಧರ್ಮಸಭೆಯಲ್ಲಿ ಶ್ರೀಗಳು ಆಶೀರ್ವಚನ ನೀಡಿದರು.

ದೇವರಿಗೆ ಆಡಂಬರ ಬೇಡ. ನಿಷ್ಕಲ್ಮಷ ಭಕ್ತಿಯಿಂದ ದೇವರನ್ನು ಒಲಿಸಿಕೊಳ್ಳಬಹುದು. ಇದನ್ನು ಅನೇಕರು ನಿರೂಪಿಸಿದ್ದಾರೆ. ಅಂಥ ಮಹನೀಯರ ಮಾರ್ಗದರ್ಶನದಲ್ಲಿ ನಡೆದು ಎಲ್ಲರೂ ತಮ್ಮ ಬದುಕನ್ನು ಸಾರ್ಥಕಪಡಿಸಿಕೊಳ್ಳಬೇಕು ಎಂದು ತಿಳಿಸಿದರು.

ಚೀಲೂರು ಗ್ರಾಮದಲ್ಲಿ ಎಲ್ಲರೂ ಒಗ್ಗಟ್ಟಿನಿಂದ ಸುಂದರವಾಗಿ ದೇವಸ್ಥಾನಗಳನ್ನು ನಿರ್ಮಿಸಿರುವುದು ಸಂತಸದ ಸಂಗತಿ. ಅವುಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಬೇಕು ಎಂದು ಕಿವಿಮಾತು ಹೇಳಿದರು.


ಹೊನ್ನಾಳಿ ಹಿರೇಕಲ್ಮಠದ ಒಡೆಯರ್ ಡಾ.ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮೀಜಿ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿ, ಮಠ-ಮಂದಿರಗಳು ಮನುಷ್ಯನಿಗೆ ಶಾಂತಿ-ನೆಮ್ಮದಿ ನೀಡುತ್ತವೆ. ಗುರುಗಳ ಮಾರ್ಗದರ್ಶನದಿಂದ ಬದುಕಿಗೆ ಅರ್ಥಪೂರ್ಣವಾದ ದಾರಿ ಕಂಡುಕೊಳ್ಳಲು ಸಾಧ್ಯ. ಈ ನಿಟ್ಟಿನಲ್ಲಿ ಎಲ್ಲರೂ ಅಡಿ ಇಡಬೇಕು ಎಂದು ತಿಳಿಸಿದರು.

ಮುಖಂಡರಾದ ಎಚ್.ಆರ್. ಸೋಮಶೇಖರ್, ಜಾವಳ್ಳಿಯ ಅರಬಿಂದೋ ಪದವಿ ಪೂರ್ವ ಕಾಲೇಜಿನ ನಿವೃತ್ತ ಉಪನ್ಯಾಸಕ ಎಂ.ಎನ್. ವಿನಾಯಕ ಇತರರು ಮಾತನಾಡಿದರು.

ಶಾಸಕ ಡಿ.ಜಿ. ಶಾಂತನಗೌಡ, ಮಾಜಿ ಶಾಸಕ ಎಂ.ಪಿ. ರೇಣುಕಾಚಾರ್ಯ, ಡಿಸಿಸಿ ಬ್ಯಾಂಕ್ ನಿರ್ದೇಶಕ ಡಿ.ಜಿ. ವಿಶ್ವನಾಥ್, ಶಿವಪ್ಪ ಕೋಡಿಕೊಪ್ಪ, ಎಚ್.ಎ. ಗದ್ದಿಗೇಶ್, ತಾಪಂ ಮಾಜಿ ಅಧ್ಯಕ್ಷ ಡಿ.ಜಿ. ರಾಜಪ್ಪ, ಮಾಜಿ ಸದಸ್ಯ ಸಿ.ಎಲ್. ಸತೀಶ್, ರೂಪ, ಕೆ.ಪಿ. ರವಿಕುಮಾರ್‌ಗೌಡ್ರು, ಎಚ್. ಶಿವಪ್ಪ, ಯತೀಶ್‌ಚಂದ್ರ ಕೋರಿ, ಶಿವ ಬ್ಯಾಂಕ್ ಮಾಜಿ ಅಧ್ಯಕ್ಷರು ಹಾಗೂ ಚೀಲೂರು ಗ್ರಾಮದ ಮುಖಂಡರಾದ ಪಿ.ಜಿ. ವೀರಭದ್ರಪ್ಪಗೌಡ್ರು, ಸಮಿತಿಯ ಧರ್ಮದರ್ಶಿಗಳಾದ ಜಿ. ಚಂದ್ರಶೇಖರಪ್ಪಗೌಡ್ರು, ಕೆ.ಎಂ. ಗಣೇಶ್, ಕೆ.ಜಿ. ಚಂದ್ರಪ್ಪ, ಕೆ.ವಿ. ವೀರೇಶ್, ಬಿ.ಸಿ. ರಮೇಶ್, ಮುಖಂಡರಾದ ಸಿ.ಎಲ್. ವಿರೂಪಾಕ್ಷಪ್ಪ, ಜಿ. ಹಾಲೇಶಪ್ಪಗೌಡ್ರು, ಕೆ.ಜಿ. ಷಣ್ಮುಖಪ್ಪಗೌಡ್ರು, ಕೆ.ಜಿ. ಗಿರೀಶ್, ಮಂಜಪ್ಪಗೌಡ್ರು ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಚೀಲೂರು ಗ್ರಾಮಸ್ಥರು ಮತ್ತು ತರಳಬಾಳು ಯುವ ಪಡೆಯ ವತಿಯಿಂದ ಡಾ.ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ ಅವರಿಗೆ ಭಕ್ತಿ ಸಮರ್ಪಣೆ ಮಾಡಲಾಯಿತು.

## ಹರಿಹರ ತಾ.ನಲ್ಲಿ ಇಂದು ಬಿಜೆಪಿ - ಜೆಡಿಎಸ್ ಜಂಟಿ ಪ್ರಚಾರ





ದಾವಣಗೆರೆ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಶ್ರೀಮತಿ ಗಾಯತ್ರಿ ಸಿದ್ದೇಶ್ವರ ಅವರ ಪರವಾಗಿ ಹರಿಹರ ತಾಲ್ಲೂಕಿನಲ್ಲಿ ಇಂದಿನಿಂದ 18 ರವರೆಗೆ ಬಿಜೆಪಿ - ಜೆಡಿಎಸ್ ನಾಯಕರು ಜಂಟಿ ಪ್ರಚಾರ ನಡೆಸಲಿದ್ದಾರೆ.

ಇಂದು ಬೆಳಿಗ್ಗೆ 9 ಗಂಟೆಗೆ ಉಕ್ಕಡಗಾತ್ರಿಯಿಂದ ಪ್ರಾರಂಭವಾಗುವ ಜಂಟಿ ಪ್ರಚಾರವು ನಂತರ ನಂದಿಗುಡಿ, ವಾಸನ, ನಂದೀಶ್ವರ ಕ್ಯಾಂಪ್, ಕೆ.ಎನ್.ಹಳ್ಳಿ, ಕೊಕ್ಕನೂರು, ಹಿಂಡಸಘಟ್ಟ, ಗೋವಿನಹಾಳ್, ಮೂಗಿನಗೊಂದಿ, ಜಿ.ಟಿ.ಕಟ್ಟಿ, ಕಂಭತ್ತನಹಳ್ಳಿ, ಹಳ್ಳಿಹಾಳ್, ಜಿ.ಬೇವಿನಹಳ್ಳಿ, ವ.ಬಸಾಪುರ, ಜಿಗಳಿ, ಯಲವಟ್ಟಿ, ಲಕ್ಕಶೆಟ್ಟಿಹಳ್ಳಿ, ಕಮಲಾಪುರ, ಭಾನುವಳ್ಳಿ, ರಾಮತೀರ್ಥ ಮತ್ತು ನಾಗೇನಹಳ್ಳಿ ಗ್ರಾಮಗಳಲ್ಲಿ ನಡೆಯಲಿದೆ.

ಶಾಸಕ ಬಿ.ಪಿ.ಹರೀಶ್, ಮಾಜಿ ಶಾಸಕ ಹೆಚ್.ಎಸ್.ಶಿವಶಂಕರ್, ಜೆಡಿಎಸ್ ಜಿಲ್ಲಾಧ್ಯಕ್ಷ ಬಿ.ಚಿದಾನಂದಪ್ಪ, ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಹನಗವಾಡಿ ವೀರೇಶ್, ತಾ. ಬಿಜೆಪಿ ಅಧ್ಯಕ್ಷ ಹಿಂಡಸಘಟ್ಟಿ ಲಿಂಗರಾಜ್, ಅಜಿತ್ ಸಾವಂತ್, ತಾ. ಜೆಡಿಎಸ್ ಅಧ್ಯಕ್ಷರಾದ ಹಳ್ಳಿಹಾಳ್ ಪರಮೇಶ್ವರಪ್ಪ, ಪ್ರೇಮ್‌ಕುಮಾರ್ ಅವರು ಜಂಟಿ ಪ್ರಚಾರ ತಂಡದಲ್ಲಿ ಭಾಗವಹಿಸಲಿದ್ದಾರೆ.

ದಿನಾಂಕ 15, 16, 17 ರಂದು ಕೊಂಡಜ್ಜಿ, ಬೆಳ್ಳೂಡಿ, ಭಾನುವಳ್ಳಿ ಜಿ.ಪಂ. ಕ್ಷೇತ್ರಗಳಲ್ಲಿ ಮತ್ತು ಮಲೇಬೆನ್ನೂರು ಪಟ್ಟಣದಲ್ಲಿ ಹಾಗೂ 18 ರಂದು ಹರಿಹರ ನಗರದಲ್ಲಿ ಪ್ರಚಾರ ನಡೆಯಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಭದ್ರಾ ಕಾಲೇಜಿಗೆ ಶೇ.95 ಫಲಿತಾಂಶ

ದಾವಣಗೆರೆ, ಏ.13- ಮಾರ್ಚ್ ತಿಂಗಳಿನಲ್ಲಿ ನಡೆದ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಭದ್ರಾ ಪದವಿ ಪೂರ್ವ ಕಾಲೇಜಿಗೆ ಶೇ.95ರಷ್ಟು ಫಲಿತಾಂಶ ಬಂದಿದೆ. ವಿಜ್ಞಾನ ವಿಭಾಗದಲ್ಲಿ ವಿ. ಆದಿತ್ಯ 588 (ಶೇ.98) ಅಂಕ ಪಡೆದು ಜಿಲ್ಲೆಗೆ 4ನೇ ಸ್ಥಾನ ಪಡೆದಿರುತ್ತಾರೆ. ವಾಣಿಜ್ಯ ವಿಭಾಗದಲ್ಲಿ ಎಚ್.ಸಿ. ಗಗನ 559 (ಶೇ.93) ಅಂಕಗಳನ್ನು ಪಡೆಯುವ ಮೂಲಕ ಕಾಲೇಜಿಗೆ ಪ್ರಥಮ ಸ್ಥಾನ ಗಳಿಸಿದ್ದಾರೆ.

ವಿಜ್ಞಾನ ವಿಭಾಗದಲ್ಲಿ 30 ಅತ್ಯುನ್ನತ ಶ್ರೇಣಿ, 55 ಪ್ರಥಮ ಸ್ಥಾನ, ವಾಣಿಜ್ಯ ವಿಭಾಗದಲ್ಲಿ 13 ಅತ್ಯುನ್ನತ ಶ್ರೇಣಿ, 41 ಪ್ರಥಮ ಸ್ಥಾನ ಪಡೆಯುವ ಮೂಲಕ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿದ್ದಾರೆ. ಕನ್ನಡ ಭಾಷೆಯಲ್ಲಿ 02, ರಸಾಯನ ಶಾಸ್ತ್ರ-02, ಜೀವಶಾಸ್ತ್ರದಲ್ಲಿ-02, ಗಣಕಶಾಸ್ತ್ರ-01, ಈ ವಿಷಯಗಳಲ್ಲಿ ವಿದ್ಯಾರ್ಥಿಗಳು ನೂರಕ್ಕೆ ನೂರು ಅಂಕಗಳನ್ನು ಪಡೆದಿದ್ದಾರೆ.

## ಏ.15ರಿಂದ 30ರವರೆಗೆ 'ಪ್ರೆಗ್ಮೆಂಟ್ಸ್ ಆಫ್ ಇಲ್ಯೂಷನ್' ಅನಿಮೇಷನ್ ಕಲಾ ಪ್ರದರ್ಶನ

ದಾವಣಗೆರೆ, ಏ.13- ದೃಶ್ಯಕಲಾ ಮಹಾವಿದ್ಯಾಲಯದ ಅನಿಮೇಷನ್ ಮತ್ತು ಮಲ್ಟಿಮೀಡಿಯಾ ವಿಭಾಗದ ವಿದ್ಯಾರ್ಥಿಗಳಿಂದ, ದೃಶ್ಯವಿಶ್ವ ಕಲಾ ಗ್ಯಾಲರಿಯಲ್ಲಿ ಏ.15ರಿಂದ 30ರವರೆಗೆ 'ಪ್ರೆಗ್ಮೆಂಟ್ಸ್ ಆಫ್ ಇಲ್ಯೂಷನ್' ಶೀರ್ಷಿಕೆಯಡಿ ಅನಿಮೇಷನ್ ಕಲಾ ಪ್ರದರ್ಶನ ಏರ್ಪಡಿಸಲಾಗಿದೆ ಎಂದು ಮಹಾವಿದ್ಯಾಲಯದ ಬೋಧನಾ ಸಹಾಯಕ ದತ್ತಾತ್ರೇಯ ಎನ್. ಭಟ್ ತಿಳಿಸಿದ್ದಾರೆ.

ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಏ.15ರ ಬೆಳಗ್ಗೆ 11 ಗಂಟೆಗೆ ದಾವಣಗೆರೆ ವಿವಿಯ (ಆಡಳಿತ) ಪ್ರಭಾರ ಕುಲಸಚಿವ ಡಾ.ಯು.ಎಸ್. ಮಹಾಬಲೇಶ್ವರ ಪ್ರದರ್ಶನ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ರಂಗಕರ್ಮಿ ಬಾ.ಮ. ಬಸವರಾಜಯ್ಯ ಭಾಗವಹಿಸುವರು. ಪ್ರಾಂಶುಪಾಲ ಡಾ. ಜೈರಾಜ್ ಎಂ. ಚಿಕ್ಕಪಾಟೀಲ, ಸಹಾಯಕ ಪ್ರಾಧ್ಯಾಪಕ ಡಾ. ಸತೀಶಕುಮಾರ ಪಿ. ವಲ್ಲೇಪುರೆ ಉಪಸ್ಥಿತರಿರಲಿದ್ದಾರೆ ಎಂದರು.

ಪ್ರತಿ ದಿನ ಬೆಳಗ್ಗೆ 10.30ರಿಂದ ಸಂಜೆ 7.30ರವರೆಗೆ ಮಹಾವಿದ್ಯಾಲಯದ ಬೋಧನಾ ಸಹಾಯಕ ರಂಗನಾಥ ಕುಲಕರ್ಣಿ ಮಾರ್ಗದರ್ಶನದಲ್ಲಿ ಆರ್. ಅರುಣ್ ಸಹಕಾರದೊಂದಿಗೆ ಅನಿಮೇಷನ್ ಮತ್ತು ಮಲ್ಟಿಮೀಡಿಯಾ ವಿಭಾಗದ ವಿದ್ಯಾರ್ಥಿಗಳಾದ ಸುಷ್ಮಿತಾ, ಲೇಖಕ್, ಪವನ್‌ಲಾಲ್ ಅಬೂಬಕರ್, ಮನೋಜ್, ಹರೀಶ್, ಕೃತಿಕಾ, ಕೀರ್ತಿ ಸಂಗೂರ್, ವೃಷಭ್‌ರಾಜ್, ದರ್ಶನ್, ಮೇಘಾ ಎಸ್. ರಾಯ್ಕರ್, ಫಿರ್‌ದೋಸ್ ನಾಲ್‌ಬಂದ್, ಆದಿತ್ಯ, ಮಹಮ್ಮದ್ ನಯಾಜ್, ಮೋನಿಕಾ ಮತ್ತು ರಚನಾ ಶೆಟ್ಟರ್ ಅವರು ರಚಿಸಿದ ಅನಿಮೇಷನ್ ಪ್ರಸ್ತುತಿಗಳು ಪ್ರದರ್ಶನಗೊಳ್ಳಲಿವೆ ಎಂದು ಮಾಹಿತಿ ನೀಡಿದರು.

ಮಹಾವಿದ್ಯಾಲಯದ ರಂಗನಾಥ ಬಿ. ಕುಲಕರ್ಣಿ, ಎಚ್.ಎಸ್. ಹರೀಶ್, ಶಿವಶಂಕರ್ ಸುತಾರ ಪತ್ರಿಕಾಗೋಷ್ಠಿಯಲ್ಲಿದ್ದರು.

# ಭಾರತ ಭೂಪಟದಲ್ಲಿ ಮತದಾನ ಜಾಗೃತಿ

### ಬಲಿಷ್ಠ ಭಾರತ ಕಟ್ಟುವಲ್ಲಿ ಯುವ ಮತದಾರರು ಮುಂದಾಗಲು ಡಿಸಿ ವೆಂಕಟೇಶ್ ಕರೆ



ದಾವಣಗೆರೆ, ಏ.14- ಯುವ ಜನರು ಮತದಾನದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಬಲಿಷ್ಠ ಭಾರತ ಕಟ್ಟುವಲ್ಲಿ ತಮ್ಮ ಸುತ್ತ-ಮುತ್ತಲಿನ ಜನರಿಗೂ ಮತದಾನದ ಮಹತ್ವ ತಿಳಿಸಿಕೊಡಬೇಕೆಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಡಾ. ವೆಂಕಟೇಶ.ಎಂ.ವಿ ಕರೆ ನೀಡಿದರು.

ಶನಿವಾರ ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ವಿವಿಧ ಇಲಾಖೆ ಮತ್ತು ಸಿದ್ದಗಂಗಾ ಸಂಸ್ಥೆಯ ಸಹಯೋಗದಲ್ಲಿ ಆಯೋಜಿಸಲಾಗಿದ್ದ ಮತದಾನ ಜಾಗೃತಿ ಕಾರ್ಯಕ್ರಮ ಉದ್ದೇಶಿಸಿ ಅವರು ಮಾತನಾಡಿದರು.

ಚುನಾವಣೆ ಪ್ರಜಾಪ್ರಭುತ್ವದ ಭದ್ರ ಬುನಾದಿ, ಯಾವುದೇ ಆಸೆ, ಆಮಿಷಗಳಿಗೆ ತುತ್ತಾಗದೇ ನಿರ್ಭೀತಿಯಿಂದ ಮತ ಚಲಾಯಿಸಿ, ಮತದಾರರ ಪಟ್ಟಿಯಲ್ಲಿ ಹೆಸರಿರುವುದನ್ನು ಖಚಿತ ಪಡಿಸಿಕೊಂಡು ಮೇ 7 ರಂದು ಕಡ್ಡಾಯವಾಗಿ ಮತದಾನ ಮಾಡಿ ಎಂದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಹಾಗೂ ಸ್ವೀಪ್ ಅಧ್ಯಕ್ಷ ಸುರೇಶ.ಬಿ.ಇಟ್ನಾಳ್ ಮಾತನಾಡಿ, ಶೇ.85 ರಷ್ಟು ಮತದಾನ ಮಾಡಿಸುವುದು ನಮ್ಮ ಗುರಿಯಾಗಿದೆ ಎಂದರು.

ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್, ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ನಾಗರಾಜ, ಜಿಲ್ಲಾ ಪಂಚಾಯತ್ ಮುಖ್ಯ ಯೋಜನಾಧಿಕಾರಿ ಮಲ್ಲಾನಾಯ್ಕ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಅಧಿಕಾರಿ ಬೇಬಿ ಸುನೀತಾ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕಿ ಜಯಲಕ್ಷ್ಮಿಬಾಯಿ ಹಾಗೂ ಸಿದ್ದಗಂಗಾ ಸಂಸ್ಥೆ ಜಯಂತ್, ಕಾಲೇಜಿನ ವಿದ್ಯಾರ್ಥಿಗಳು ಸಿಬ್ಬಂದಿಗಳು ಉಪಸ್ಥಿತರಿದ್ದರು. ಸಿದ್ದಗಂಗಾ ಶಾಲೆ ವಿದ್ಯಾರ್ಥಿಗಳು ಭಾರತ ಭೂಪಟ ಆಕಾರದಲ್ಲಿ ನಿಲ್ಲುವ ಮೂಲಕ ಮೇ 7 ರಂದು ಮತದಾನ ಮಾಡಿ ಎಂಬ ಸಂದೇಶವನ್ನು ತಿಳಿಸಿದರು.

## ಕೊಂಡಜ್ಜಿ ಬಸಪ್ಪ ಸಮಾಧಿಗೆ ಪ್ರಭಾ ಮಲ್ಲಿಕಾರ್ಜುನ್‌ರಿಂದ ಪೂಜೆ



ಮಲೇಬೆನ್ನೂರು, ಏ.13- ಕೊಂಡಜ್ಜಿ ಗ್ರಾಮದಲ್ಲಿ ಚುನಾವಣಾ ಪ್ರಚಾರಕ್ಕೆ ಆಗಮಿಸಿದ್ದ ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು, ಮಾಜಿ ಕೇಂದ್ರ ಸಚಿವರಾದ ಕೊಂಡಜ್ಜಿ ಬಸಪ್ಪ ಅವರ ಸಮಾಧಿಗೆ ತೆರಳಿ ಪೂಜೆ ಸಲ್ಲಿಸಿದರು.

ಮಾಜಿ ಶಾಸಕ ಎಸ್.ರಾಮಪ್ಪ, ಕಾಂಗ್ರೆಸ್ ಮುಖಂಡರಾದ ನಂದಿಗಾವಿ ಶ್ರೀನಿವಾಸ್, ಬಿ.ಎಂ.ವಾಗೀಶ್ ಸ್ವಾಮಿ, ಬೆಣ್ಣೆಹಳ್ಳಿ ಹಾಲೇಶಪ್ಪ, ಎಂ. ನಾಗೇಂದ್ರಪ್ಪ, ಸಿರಿಗೆರೆ ರಾಜಣ್ಣ, ನಿಖಿಲ್ ಕೊಂಡಜ್ಜಿ, ಎಲ್.ಬಿ.ಹನುಮಂತಪ್ಪ, ಎಂ.ಬಿ.ಅಬೀದ್ ಅಲಿ, ಹನಗವಾಡಿ ಕುಮಾರ್, ಜಿ.ಮಂಜುನಾಥ್ ಪಟೇಲ್, ಜಿಗಳಿ ಆನಂದಪ್ಪ, ತಳಸದ ಬಸವರಾಜ್, ಕೆ.ಪಿ.ಗಂಗಾಧರ್, ಸೈಯದ್ ಜಾಕೀರ್, ಎಂ.ಬಿ.ಫೈಜು, ಕುಂಬಳೂರು ವಿರೂಪಾಕ್ಷಪ್ಪ, ದ್ಯಾವಪ್ಪರೆಡ್ಡಿ, ನಂದಿಗಾವಿ ತಿಪ್ಪೇಸ್ವಾಮಿ, ಆರ್.ಟಿ.ಪ್ರಶಾಂತ್, ಗುತ್ತೂರು ಹಾಲೇಶಗೌಡ ಸೇರಿದಂತೆ ಇನ್ನೂ ಅನೇಕರು ಈ ವೇಳೆ ಹಾಜರಿದ್ದರು.

## ದಕ್ಷಿಣ ಕ್ಷೇತ್ರದಲ್ಲಿ ಪಕ್ಷೇತರ ಅಭ್ಯರ್ಥಿ ವಿನಯ್ ಕುಮಾರ್ ಪರ ಪ್ರಚಾರ



ದಾವಣಗೆರೆ, ಏ. 13- ದಾವಣಗೆರೆ ಲೋಕಸಭಾ ಕ್ಷೇತ್ರದ ಪಕ್ಷೇತರ ಅಭ್ಯರ್ಥಿ ಜಿ.ಬಿ. ವಿನಯ್ ಕುಮಾರ್ ಕಕ್ಕರಗೊಳ್ಳ ಅವರ ಪರ ಮಹಿಳಾ ಮುಖಂಡರು, ಸ್ತ್ರೀಶಕ್ತಿ ಗುಂಪಿನ ಸದಸ್ಯರು ಪ್ರಚಾರ ನಡೆಸಿದರು.

ದಕ್ಷಿಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿನ ಕುಕ್ಕುವಾಡ, ಹಳೇ ಕೋಳೇನಹಳ್ಳಿ, ಹೊಸ ಕೋಳೇನಹಳ್ಳಿ, ಕನಗೊಂಡನಹಳ್ಳಿ, ಬಲ್ಲೂರು, ಜಡಗನಹಳ್ಳಿ, ಸಿರಗಾನಹಳ್ಳಿ ಗ್ರಾಮಗಳಲ್ಲಿ ಮನೆ-ಮನೆಗೆ ತೆರಳಿ ಮತದಾರರ ಮನವೊಲಿಸುವ ಪ್ರಯತ್ನ ಮಾಡಿದರು.

ಗ್ರಾಮೀಣ ಯುವಕ, ವಿದ್ಯಾವಂತ, ಉನ್ನತ ಅಧಿಕಾರಿಗಳನ್ನು ಕೊಡುಗೆ ನೀಡಿದಂತಹ ಶೈಕ್ಷಣಿಕ ಕ್ರಾಂತಿಕಾರಿ, ಬಡವರ, ಹಿಂದುಳಿದವರ ಬಗ್ಗೆ ಅಪಾರ ಕಾಳಜಿ ಹೊಂದಿರುವ, ಸದಾ ಅಭಿವೃದ್ಧಿ ಬಗ್ಗೆ ಚಿಂತನೆ ಮಾಡುವ ವಿನಯ್ ಕುಮಾರ್ ಅವರಂಥವರಿಗೆ ಮತ ನೀಡಿ ಗೆಲ್ಲಿಸುವಂತೆ ಮನವಿ ಮಾಡಿದರು.

ಕಕ್ಕರಗೊಳ್ಳ ಗ್ರಾ.ಪಂ.ಉಪಾಧ್ಯಕ್ಷೆ, ಸ್ತ್ರೀಶಕ್ತಿ ಸಂಘಗಳ ತಾಲ್ಲೂಕು ಒಕ್ಕೂಟ ಅಧ್ಯಕ್ಷರಾದ ಕೆ.ಬಿ. ಶಕುಂತಲಾ ಬಸವರಾಜಪ್ಪ, ಶೈಲಾ ಬಿ.ವಿ. ಜಗದೀಶ್ ಒಡೆಯರ್, ಸ್ತ್ರೀಶಕ್ತಿ ಒಕ್ಕೂಟದ ಸದಸ್ಯರಾದ ವನಜಾಕ್ಷಮ್ಮ, ಕೋಳೇನಹಳ್ಳಿ ಸುನಂದಾ ವೆರ್ಣೇಕರ್, ರುದ್ರೇಶ್ ಜಿ. ಎನ್. ಹೊಸಕೋಳೆನಹಳ್ಳಿ, ಪುರಂದರ ಲೋಕಿಕೆರೆ, ಚಿಕ್ಕಣ್ಣ ಮಲ್ಲನಾಯಕನಹಳ್ಳಿ ಮತ್ತಿತರರು ಭಾಗವಹಿಸಿದ್ದರು.

## ಎಲೆಬೇತೂರು 18ರಂದು ಶ್ರೀ ಸವಗದ್ದಿಗೆ ಸಂಗಮೇಶ್ವರ ಸ್ವಾಮಿಯ ರಥೋತ್ಸವ

ದಾವಣಗೆರೆ, ಏ. 13- ತಾಲ್ಲೂಕಿನ ಎಲೆಬೇತೂರು ಗ್ರಾಮದಲ್ಲಿ ಶ್ರೀ ಸವಗದ್ದಿಗೆ ಸಂಗಮೇಶ್ವರ ಸ್ವಾಮಿಯ ರಥೋತ್ಸವ ಹಾಗೂ ಜಾತ್ರಾ ಮಹೋತ್ಸವ ಕಾರ್ಯಕ್ರಮಗಳು ಇಂದಿನಿಂದ ಆರಂಭಗೊಳ್ಳಲಿದ್ದು, ದಿ. 18ರ ಗುರುವಾರ ರಥೋತ್ಸವ ನಡೆಯಲಿದೆ.

ಇಂದು ಬೆಳಿಗ್ಗೆ ಉಚ್ಚಾಯದ ಗಾಲಿ ಹೊರಕ್ಕೆ ಹಾಕುವುದು, 16ರ ಮಂಗಳವಾರ ರಾತ್ರಿ 7.30ಕ್ಕೆ ಕಂಕಣಧಾರಣೆ, 18ರ ಗುರುವಾರ ಮುಂಜಾನೆ 6 ಗಂಟೆಗೆ ಉಚ್ಚಾಯ ರಥೋತ್ಸವ ಹಾಗೂ ಸಂಜೆ 4.30ಕ್ಕೆ ಶ್ರೀ ಸವಗದ್ದಿಗೆ ಸಂಗಮೇಶ್ವರ ಮಹಾಸ್ವಾಮಿಯ ರಥೋತ್ಸವ ಜರುಗಲಿದೆ.

ದಿ. 19ರ ಶುಕ್ರವಾರ ಬೆಳಿಗ್ಗೆ 8 ಗಂಟೆಗೆ ಹಾಗೂ ಸಂಜೆ 4 ಗಂಟೆಗೆ ಬಯಲು ಜಂಗೀ ಕುಸ್ತಿ, ರಾತ್ರಿ 7.30ಕ್ಕೆ ಪಲ್ಲಕ್ಕಿ ಉತ್ಸವದೊಂದಿಗೆ ಓಕಳಿ ಉತ್ಸವ ನಡೆಯಲಿದ್ದು, ಭಕ್ತಾದಿಗಳು ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ಸ್ವಾಮಿಯ ಕೃಪೆಗೆ ಪಾತ್ರರಾಗಬೇಕೆಂದು ದೇವಸ್ಥಾನ ಕಮಿಟಿಯವರು ತಿಳಿಸಿದ್ದಾರೆ.

## ವಯನಾಡ್ : ರಾಹುಲ್ ಪ್ರಚಾರದ ವೇಳೆ ಬಾವುಟ ಪ್ರದರ್ಶನವಿಲ್ಲ

ವಯನಾಡ್, ಏ. 13 – ಕೇರಳದ ವಯನಾಡ್ ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ರಾಹುಲ್ ಗಾಂಧಿ ಪ್ರಚಾರ ಮಾಡುವಾಗ ಯಾವುದೇ ಬಾವುಟಗಳನ್ನು ಬಳಸುವುದಿಲ್ಲ ಎಂದು ಕೇರಳ ಕಾಂಗ್ರೆಸ್ ಹಂಗಾಮಿ ಅಧ್ಯಕ್ಷ ಎಂ.ಎಂ. ಹಸನ್ ತಿಳಿಸಿದ್ದಾರೆ.

ರಾಹುಲ್ ಗಾಂಧಿ ಮುಂದಿನ ವಾರ ಕ್ಷೇತ್ರದಲ್ಲಿ ಪ್ರಚಾರ ನಡೆಸಲಿದ್ದಾರೆ. ಆಗ ಕಾಂಗ್ರೆಸ್ ಹಾಗೂ ಮಿತ್ರ ಪಕ್ಷಗಳು ಯಾವುದೇ ಬಾವುಟ ಬಳಸಬಾರದು ಎಂಬ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಹಸನ್ ಹೇಳಿದ್ದಾರೆ. ಆದರೆ, ಈ ನಿರ್ಧಾರಕ್ಕೆ ಕಾರಣವೇನು ಎಂಬುದನ್ನು ಅವರು ತಿಳಿಸಿಲ್ಲ.

ಈ ಹಿಂದೆ ವಯನಾಡಿನಲ್ಲಿ ರಾಹುಲ್ ಗಾಂಧಿ ರೋಡ್ ಶೋ ನಡೆಸಿದಾಗಲೂ ಸಹ ಕಾಂಗ್ರೆಸ್ ಇಲ್ಲವೇ ಅದರ ಮಿತ್ರಪಕ್ಷ ಇಂಡಿಯನ್ ಯೂನಿಯನ್ ಮುಸ್ಲಿಮ್ ಲೀಗ್‌ನ ಬಾವುಟ ಪ್ರದರ್ಶಿಸಿರಲಿಲ್ಲ. ಇದು ಸಿಪಿಐ (ಎಂ) ಹಾಗೂ ಬಿಜೆಪಿ ಎರಡರ ಲೇವಡಿಗೂ ಕಾರಣವಾಗಿತ್ತು.

## ಚೀಲೂರಲ್ಲಿ ಇಂದು ಅಶ್ವಾರೋಹಣ

ನ್ಯಾಮತಿ ತಾಲ್ಲೂಕಿನ ಚೀಲೂರು ಶ್ರೀ ವೀರಭದ್ರೇಶ್ವರ ಸ್ವಾಮಿ, ಶ್ರೀ ಈಶ್ವರ ದೇವಾಲಯದ ಪ್ರವೇಶೋತ್ಸವ, ಕಳಸಾರೋಹಣ, ಶ್ರೀ ವೀರಭದ್ರೇಶ್ವರ ಸ್ವಾಮಿ, ಶ್ರೀ ಲಕ್ಷ್ಮಿರಂಗನಾಥ ಸ್ವಾಮಿ ಕೆಂಡದಾರ್ಚನೆ ಹಾಗೂ ರಥೋತ್ಸವದ ಪ್ರಯುಕ್ತ ಇಂದು ಅಶ್ವಾರೋಹಣ ಮಹೋತ್ಸವ, ನಾಳೆ ಸೋಮವಾರ ಗಜಾರೋಹಣ ಮಹೋತ್ಸವ ಜರುಗಲಿವೆ.

## ಹರಪನಹಳ್ಳಿ ತಾ.ನಲ್ಲಿ ಇಂದು ಪ್ರಭಾ ಮಲ್ಲಿಕಾರ್ಜುನ್ ಪ್ರವಾಸ

ದಾವಣಗೆರೆ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ಇಂದು ಹರಪನಹಳ್ಳಿ ವಿಧಾನಸಭಾ ಕ್ಷೇತ್ರದ ವಿವಿಧ ಗ್ರಾಮಗಳಲ್ಲಿ ಪ್ರವಾಸ ಕೈಗೊಳ್ಳುವರು. ತಾಲ್ಲೂಕಿನ ದುಗ್ಗಾವತಿ ಗ್ರಾಮದಿಂದ ಬೆಳಿಗ್ಗೆ 9.30 ರಿಂದ ಕಡತಿ, ನಿಟ್ಟೂರು, ಹಲವಾಗಲು, ಕುಂಚೂರು, ಕೆ.ಕಲ್ಲಹಳ್ಳಿ, ನೀಲಗುಂದ, ಚಿರಸ್ತಹಳ್ಳಿ, ಗುಂಡಗತ್ತಿ, ಯಡಿಹಳ್ಳಿ, ತೆಲಗಿ ಗ್ರಾಮಗಳಲ್ಲಿ ರಾತ್ರಿ 8.30 ಗಂಟೆಯವರೆಗೆ ಮತಯಾಚನೆ ಮಾಡುವರು. ಪ್ರಭಾ ಮಲ್ಲಿಕಾರ್ಜುನ್ ಅವರೊಂದಿಗೆ ಶಾಸಕರಾದ ಶ್ರೀಮತಿ ಲತಾ ಮಲ್ಲಿಕಾರ್ಜುನ್ ಅವರು ಪ್ರಚಾರ ಕಾರ್ಯದಲ್ಲಿ ಭಾಗವಹಿಸುವಲಿದ್ದಾರೆ ಎಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರುಗಳಾದ ಅಂಜಿನಪ್ಪ ಮತ್ತು ಕುಬೇರಪ್ಪ ತಿಳಿಸಿದ್ದಾರೆ.

## ಶತಾಯುಷಿಗೆ ಇಂದಿರಾಗಾಂಧಿ ನೆನಪಿಸಿದ ಪ್ರಭಾ ಮಲ್ಲಿಕಾರ್ಜುನ್



ಮಲೇಬೆನ್ನೂರು, ಏ.13- ಹೊಟ್ಟಿಗೇನಹಳ್ಳಿ ಯಲ್ಲಿ ಶನಿವಾರ ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು, ಶತಾಯುಷಿ ವೃದ್ಧೆಗೆ ಇಂದಿರಾಗಾಂಧಿಯವರ ನೆನಪುಗಳನ್ನು ಹೇಳಿ ಮತಯಾಚಿಸುವ ಮೂಲಕ ಅವರ ಆಶೀರ್ವಾದ ಪಡೆದು ಗಮನ ಸೆಳೆದರು.

## ಎಸ್ಸೆಸ್ಸೆಂ ಅಧ್ಯಕ್ಷತೆಯಲ್ಲಿಂದು ಕಾಂಗ್ರೆಸ್ ಸಭೆ

ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಅವರ ಅಧ್ಯಕ್ಷತೆಯಲ್ಲಿ ಇಂದು ಸಂಜೆ 6 ಗಂಟೆಗೆ ಕಲ್ಲೇಶ್ವರ ರೈಸ್‌ಮಿಲ್‌ನಲ್ಲಿ ಕಾಂಗ್ರೆಸ್ ಸಭೆ ಕರೆಯಲಾಗಿದೆ.

## ಬಿಜೆಪಿ ವಿವಿಧ ಭಾಷಿಕರ ಪ್ರಕೋಷ್ಠದ ರಾಜ್ಯ ಸಮಿತಿ ಸದಸ್ಯರಾಗಿ ಪಿ. ಗುಜ್ಜರ್



ದಾವಣಗೆರೆ, ಏ. 13- ಭಾರತೀಯ ಜನತಾ ಪಾರ್ಟಿಯ ವಿವಿಧ ಭಾಷಿಕರ ಪ್ರಕೋಷ್ಠದ ರಾಜ್ಯ ಸಮಿತಿ ಸದಸ್ಯರಾಗಿ ಪಿ. ಗುಜ್ಜರ್ (ರಮೇಶ್ ಗುಜ್ಜರ್) ಅವರನ್ನು ನಿಯುಕ್ತಿ ಮಾಡಲಾಗಿದೆ ಎಂದು ರಾಜ್ಯ ಸಂಚಾಲಕ ಕೆ. ನರೇಂದ್ರ ತಿಳಿಸಿದ್ದಾರೆ.


## ಇಂದು ಜಿಲ್ಲಾ ಕಾಂಗ್ರೆಸ್‌ನಿಂದ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ



ದಾವಣಗೆರೆ : ಜಿಲ್ಲಾ ಕಾಂಗ್ರೆಸ್ ವತಿಯಿಂದ ಇಂದು ಬೆಳಿಗ್ಗೆ 8.30ಕ್ಕೆ ಎಸ್.ಎಸ್.ಮಲ್ಲಿಕಾರ್ಜುನ್ ಅವರ ಮನೆಯಲ್ಲಿ ಜಿಲ್ಲಾಧ್ಯಕ್ಷ ಹೆಚ್.ಬಿ.ಮಂಜಪ್ಪನವರ ಅಧ್ಯಕ್ಷತೆಯಲ್ಲಿ ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಜಯಂತಿ ಆಚರಿಸಲಾಗುವುದು. ಸಚಿವ ಎಸ್.ಎಸ್.ಮಲ್ಲಿಕಾರ್ಜುನ್, ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ.ಪ್ರಭಾ ಮಲ್ಲಿಕಾರ್ಜುನ್ ಅವರು ಭಾಗವಹಿಸುವರು ಎಂದು ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ ತಿಳಿಸಿದ್ದಾರೆ.


॥ ಶ್ರೀ ವೆಂಕಟೇಶ್ವರ ಸ್ವಾಮಿ ಪ್ರಸನ್ನ ॥

**ಕೈಲಾಸ ಶಿವಗಣಾರಾಧನೆ ಆಹ್ವಾನ**



ಚಿತ್ರದುರ್ಗ ಜಿ. ಹೊಳಲ್ಕೆರೆ ತಾ. ಬಾಣಗೆರೆ ಗ್ರಾಮದ ವಾಸಿ ದಿ. ಶ್ರೀ ಟಿ. ಸಿದ್ದಪ್ಪ ನಿ.ಡಿ.ಡಿ.ಎ. ಇವರ ತಮ್ಮ ಮಗನಾದ ಶ್ರೀ ಜಿ. ಪ್ರಶಾಂತ್, ಇವರು ಮಾಡುವ ವಿಜ್ಞಾಪನೆಗಳು ಆತ್ಮೀಯ ಬಂಧುಗಳೇ,

ದಿ. 07.04.2024ನೇ ಭಾನುವಾರ ಬೆಳಿಗ್ಗೆ 8.45ಕ್ಕೆ ನನ್ನ ಪೂಜ್ಯ ತಂದೆಯವರಾದ

**ಶ್ರೀ ಟಿ. ಗುರುಸ್ವಾಮಿ**

(ನಿ. ಪ್ರಾಂಶುಪಾಲರು, ಕೃಷಿ ವಿಶ್ವವಿದ್ಯಾಲಯ, ರಾಯಚೂರು)

ಇವರು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**ಕೈಲಾಸ ಶಿವಗಣಾರಾಧನೆಯನ್ನು**

ದಿನಾಂಕ 15.04.2024ನೇ ಸೋಮವಾರ ಬೆಳಿಗ್ಗೆ 10.30ಕ್ಕೆ ನಂ. 1780/6, ಗುರು ಕೃಪ, 6ನೇ ಕ್ರಾಸ್, 1ನೇ ಮೇನ್, ವಿನಾಯಕ ಬಡಾವಣೆ, ವಿದ್ಯಾನಗರ, ದಾವಣಗೆರೆ ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :

**ಶ್ರೀಮತಿ ಜಿ.ಸಿ. ಸುಮಾ, ಶ್ರೀ ಜಿ. ಪ್ರಶಾಂತ್, ದಾವಣಗೆರೆ.**
**ಶ್ರೀಮತಿ ಜಿ. ಸ್ಮಿತಾ, ಶ್ರೀ ಉಮೇಶ್ ಮತ್ತು ಕೊಳ್ಳೇರ ವಂಶಸ್ಥರು,**
**ಬಾಣಗೆರೆ ಹಾಗೂ ಬಂಧು-ಮಿತ್ರರು. 99012 75062**

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಲು ಕೋರಿದೆ.


**ಶ್ರೀಮತಿ ದುಗ್ಗಮ್ಮ ನಿಧನ**



ದಾವಣಗೆರೆ ಸಿಟಿ ಜಾಲಿನಗರ 2ನೇ ಮೇನ್, 4ನೇ ಕ್ರಾಸ್ ವಾಸಿ ಶ್ರೀಮತಿ ದುಗ್ಗಮ್ಮ (62) ಅವರು ದಿನಾಂಕ : 13.04.2024 ರಂದು ಶನಿವಾರ ಸಂಜೆ 5.30ಕ್ಕೆ ನಿಧನರಾಗಿದ್ದಾರೆ. ಸಹೋದರರು, ಸಹೋದರಿಯರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 14.04.2024 ರಂದು ಭಾನುವಾರ ಮಧ್ಯಾಹ್ನ 12 ಗಂಟೆಗೆ ನಗರದ ಸಾರ್ವಜನಿಕ ರುದ್ರಭೂಮಿಯಲ್ಲಿ ನೆರವೇರಲಿದೆ.

## ತ್ಯಾವಣಿಗೆ ಗ್ರಾಮಕ್ಕೆ ನಾಳೆ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಭೇಟಿ

ದಾವಣಗೆರೆ, ಏ.13- ಮಾಯಕೊಂಡ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ತ್ಯಾವಣಗಿ ಗ್ರಾಮಕ್ಕೆ ನಾಡಿದ್ದು ದಿನಾಂಕ 15ರಂದು ಮಧ್ಯಾಹ್ನ 1.30ಕ್ಕೆ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಭೇಟಿ ನೀಡಲಿದ್ದಾರೆ ಎಂದು ಮಾಯಕೊಂಡ ಬಿಜೆಪಿ ಮಂಡಲ ಅಧ್ಯಕ್ಷ ಶ್ಯಾಗಲೆ ದೇವೇಂದ್ರಪ್ಪ ಹೇಳಿದರು.

ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ತ್ಯಾವಣಿಗೆಯ ನೀರಾವರಿ ಇಲಾಖೆ ಆವರಣದಲ್ಲಿ ನಡೆಯಲಿರುವ ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ್ ಅವರ ಚುನಾವಣಾ ಪ್ರಚಾರ ಸಭೆಯಲ್ಲಿ ಭಾಗವಹಿಸಲು ಯಡಿಯೂರಪ್ಪನವರು ಆಗಮಿಸಲಿದ್ದಾರೆ ಎಂದರು. ಸಂಸದ ಜಿ.ಎಂ. ಸಿದ್ದೇಶ್ವರ, ಮಾಜಿ ಸಚಿವರಾದ ಎಸ್.ಎ. ರವೀಂದ್ರನಾಥ್, ಎಂ.ಪಿ. ರೇಣುಕಾಚಾರ್ಯ, ಜಿ. ಕರುಣಾಕರ ರೆಡ್ಡಿ, ಹರಿಹರ ಶಾಸಕ ಬಿ.ಪಿ. ಹರೀಶ್, ಜಿಲ್ಲಾ ಬಿಜೆಪಿ ಅಧ್ಯಕ್ಷ ಎನ್.ರಾಜಶೇಖರ್, ಮಾಜಿ ಶಾಸಕರಾದ ಮಾಡಾಳ್ ವಿರೂಪಾಕ್ಷಪ್ಪ, ಎಸ್.ವಿ. ರಾಮಚಂದ್ರಪ್ಪ, ಎಚ್.ಪಿ. ರಾಜೇಶ್, ಪ್ರೊ.ಎನ್. ಲಿಂಗಣ್ಣ, ಎಂ. ಬಸವರಾಜ ನಾಯ್ಕ, ಜೆಡಿಎಸ್ ಜಿಲ್ಲಾ ನಾಯಕರಾದ ಎಚ್. ಎಸ್. ಶಿವಶಂಕರ್, ಬಿ. ಚಿದಾನಂದಪ್ಪ ಮತ್ತಿತರರು ಪಾಲ್ಗೊಳ್ಳುವರು ಎಂದು ಮಾಹಿತಿ ನೀಡಿದರು.

ಪತ್ರಿಕಾಗೋಷ್ಠಿಯಲ್ಲಿ ಮುಖಂಡರಾದ ಅನಿಲ್‌ಕುಮಾರ್ ಕತ್ತಲಗೆರೆ, ಅಣಜಿ ಗುಡ್ಡೇಶ್, ಮಹೇಂದ್ರ ಹೆಬ್ಬಾಳ್, ಕರಿಲಕ್ಕೇನಹಳ್ಳಿ ಓಂಕಾರಪ್ಪ ಇದ್ದರು.

## ಇಂದು ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ

ಲೋಕಸಭಾ ಚುನಾವಣೆ ನೀತಿ ಸಂಹಿತೆ ಹಿನ್ನೆಲೆಯಲ್ಲಿ ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ್, ಸಮಾಜ ಕಲ್ಯಾಣ ಇಲಾಖೆ, ಮಹಾನಗರ ಪಾಲಿಕೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಡಾ. ಬಿ. ಆರ್. ಅಂಬೇಡ್ಕರ್ ಅವರ 133 ನೇ ಜನ್ಮ ದಿನಾಚರಣೆಯನ್ನು ಇಂದು ಸರಳವಾಗಿ ಆಚರಿಸಲಾಗುತ್ತದೆ.

ದಿನಾಚರಣೆ ಅಂಗವಾಗಿ ಬೆಳಿಗ್ಗೆ 10.30ಕ್ಕೆ ಅಂಬೇಡ್ಕರ್ ವೃತ್ತದಲ್ಲಿನ ಡಾ. ಬಿ.ಆರ್. ಅಂಬೇಡ್ಕರ್ ಅವರ ಪ್ರತಿಮೆಗೆ ಗಣ್ಯರಿಂದ ಮಾಲಾರ್ಪಣೆ ಮಾಡಿ ನಂತರ ಬೆಳಿಗ್ಗೆ 11.30 ಕ್ಕೆ ಜಿಲ್ಲಾಡಳಿತ ಭವನದ ತುಂಗಭದ್ರಾ ಸಭಾಂಗಣದಲ್ಲಿ ವೇದಿಕೆ ಕಾರ್ಯಕ್ರಮ ನಡೆಯಲಿದೆ ಎಂದು ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ಕೆ. ನಾಗರಾಜ ಅವರು ತಿಳಿಸಿದ್ದಾರೆ.

## ನಾಳೆಯಿಂದ ಮೇ 15 ರವರೆಗೆ ಉಚಿತ ನೇತ್ರ ತಪಾಸಣೆ

ದಾವಣಗೆರೆ, ಏ. 13- ದಾವಣಗೆರೆ ನೇತ್ರಾಲಯ, ಡಾ. ಅಗರವಾಲ್ಸ್ ಕಣ್ಣಿನ ಆಸ್ಪತ್ರೆಯ ಪ್ರಥಮ ವರ್ಷದ ವಾರ್ಷಿಕೋತ್ಸವದ ಅಂಗವಾಗಿ ಇದೇ ದಿನಾಂಕ 15 ರಿಂದ ಮೇ 15 ರವರೆಗೆ ಒಂದು ತಿಂಗಳ ಕಾಲ ಉಚಿತ ನೇತ್ರ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗಾಗಿ ದಾವಣಗೆರೆ ನೇತ್ರಾಲಯ, ಡಾ. ಅಗರವಾಲ್ಸ್ ಕಣ್ಣಿನ ಆಸ್ಪತ್ರೆ, ಗುಂಡಿ ಮಹದೇವಪ್ಪ ಕಲ್ಯಾಣ ಮಂಟಪದ ಪಕ್ಕದ ರಸ್ತೆ, ಎಂಸಿಸಿ ಬಿ ಬ್ಲಾಕ್ ದಾವಣಗೆರೆ ಇವರನ್ನು (08192-222565, 8310160893) ಸಂಪರ್ಕಿಸುವುದು.

## ಕೈಲಾಸ ಶಿವಗಣಾರಾಧನೆ ಆಹ್ವಾನ

॥ ಶ್ರೀ ಕೋಗುಂಡಿ ಬಸವೇಶ್ವರ ಪ್ರಸನ್ನ ॥
ದಾವಣಗೆರೆ ಸಿಟಿ ಶಾಮನೂರು ವಾಸಿ
**ಶ್ರೀ ಬೂದಿಹಾಳ್ ನಾಗರಾಜಪ್ಪ ಮತ್ತು ಸಹೋದರರು**
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 3.4.2024ನೇ ಬುಧವಾರ ಮಧ್ಯಾಹ್ನ 12.50ಕ್ಕೆ ನಮ್ಮ ಅಣ್ಣನವರಾದ



ಜನನ : 01.04.1946
ನಿಧನ : 03.04.2024

**ಶ್ರೀ ಬೂದಿಹಾಳ್ ರಾಮಚಂದ್ರಪ್ಪನವರು**
ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**ಕೈಲಾಸ ಶಿವಗಣಾರಾಧನೆಯನ್ನು**
ದಿನಾಂಕ 15.04.2024ನೇ ಸೋಮವಾರ ಬೆಳಿಗ್ಗೆ 10.30ಕ್ಕೆ ಮೃತರ ಸ್ವಗೃಹ ಜೆ.ಹೆಚ್. ಪಟೇಲ್ ಬಡಾವಣೆ, ನಾಗನೂರು ರಸ್ತೆ, ಶಾಮನೂರು ಇಲ್ಲಿ ನೆರವೇರಿಸಲು ಗುರು - ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ದುಃಖತಪ್ತ ಕುಟುಂಬ ವರ್ಗ :
ಮೃತರ ಧರ್ಮಪತ್ನಿ ಶ್ರೀಮತಿ ರತ್ನಮ್ಮ ಮತ್ತು ಮಕ್ಕಳು ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಬೂದಿಹಾಳ್ ವಂಶಸ್ಥರು, ಶಾಮನೂರು ಗ್ರಾಮಸ್ಥರು ಹಾಗೂ ಬಂಧು - ಮಿತ್ರರು.
ಬಿ.ಆರ್. ಬಸವರಾಜ್ : 99162 77746, ಬಿ.ಆರ್. ಲಿಂಗರಾಜ್ : 95384 44615

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಲು ವಿನಂತಿ.

## ಬೆಳಲಗೆರೆ ಗ್ರಾಮದ ಭಾಗ್ಯಮ್ಮ ನಿಧನ




ಚನ್ನಗಿರಿ ತಾಲ್ಲೂಕು ಬೆಳಲಗೆರೆ ಗ್ರಾಮದ ವಾಸಿ ಶ್ರೀ ಗುತ್ತ್ಯೆಪ್ಪರ ಲೋಕೇಶಪ್ಪನವರ ಧರ್ಮಪತ್ನಿ
**ಶ್ರೀಮತಿ ಭಾಗ್ಯಮ್ಮ** ಅವರು
ದಿನಾಂಕ 13-04-2024ರ ಶನಿವಾರ ರಾತ್ರಿ 8.30 ಕ್ಕೆ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 68 ವರ್ಷ ವಯಸ್ಸಾಗಿತ್ತು. ಪತಿ, ಮೂವರು ಪುತ್ರರು, ಇಬ್ಬರು ಪುತ್ರಿಯರು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ
ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 14-04-2024ರ ಭಾನುವಾರ ಮಧ್ಯಾಹ್ನ 2 ಗಂಟೆಗೆ ಬೆಳಲಗೆರೆ ಗ್ರಾಮದಲ್ಲಿ ನೆರವೇರಿಸಲಾಗುವುದು.

ಇಂತಿ ದುಃಖತಪ್ತರು : ಪತಿ, ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು. ಮೊ. : 94499 78555, 94487 82444

॥ ಶ್ರೀ ವೆಂಕಟೇಶ್ವರ ಪ್ರಸನ್ನ ॥ ॥ ಶ್ರೀ ಮುರುಡ ಬಸವೇಶ್ವರ ಪ್ರಸನ್ನ ॥

## ಕೈಲಾಸ ಶಿವಗಣಾರಾಧನೆ ಆಹ್ವಾನ





ಶ್ರೀಮದ್ ವೃಷಭಪುರಿ ಸೂರ್ಯ ಸಿಂಹಾಸನಾಧೀಶ್ವರ 1108 ಜಗದ್ಗುರು ಶ್ರೀ ಶ್ರೀ ಶ್ರೀ ಸಿದ್ಧರಾಮೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು
ವೃಷಭಪುರಿ ಸಂಸ್ಥಾನ, ಬೃಹನ್ಮಠ-ನಂದಿಗುಡಿ, ಇವರ ಕೃಪಾಶೀರ್ವಾದಗಳೊಂದಿಗೆ
ಹರಿಹರ ತಾಲ್ಲೂಕು, ಹಳ್ಳಿಹಾಳ್ ಗ್ರಾಮದ ವಾಸಿ
**ಊರಮುಂದ್ಲರ ಶ್ರೀ ಹೆಚ್.ಟಿ. ಶಾಂತನಗೌಡ್ರು**
ಅಧ್ಯಕ್ಷರು, ಶ್ರೀ ನಂದಿ ಸೌಹಾರ್ದ ಸಹಕಾರಿ ನಿ., ಮಲೇಬೆನ್ನೂರು.
ಇವರು ಮಾಡುವ ವಿಜ್ಞಾಪನೆಗಳು.

ಆತ್ಮೀಯರೇ.... ದಿನಾಂಕ : 06.04.2024ನೇ ಶನಿವಾರ ರಾತ್ರಿ 7.30ಕ್ಕೆ ನನ್ನ ಸಹೋದರನಾದ
**ಊರಮುಂದ್ಲರ ಶ್ರೀ ಹೆಚ್.ಟಿ. ಹನುಮಗೌಡ್ರು**
(ಮಾಜಿ ಅಧ್ಯಕ್ಷರು, ವಿಎಸ್ಎಸ್ಎನ್, ಜಿಗಳಿ)
ಇವರು ಶಿವೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ **'ಶಿವಗಣಾರಾಧನೆ'ಯನ್ನು**
ದಿನಾಂಕ 14-04-2024ನೇ ಭಾನುವಾರ ಬೆಳಗ್ಗೆ 10 ಗಂಟೆಗೆ ಹಳ್ಳಿಹಾಳ್ ಗ್ರಾಮದ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :
- ಶ್ರೀಮತಿ ಶಿವಲಿಂಗಮ್ಮ ಶ್ರೀ ಹನುಮಗೌಡ್ರು ಮತ್ತು ಮಕ್ಕಳು
- ಶ್ರೀಮತಿ ಭಾರತಿ ಕೋಂ. ದಿ॥ ಡಾ. ಹೆಚ್.ಟಿ. ಬಸವನಗೌಡ್ರು
- ಶ್ರೀಮತಿ ಸಾವಿತ್ರಮ್ಮ ಶ್ರೀ ಹೆಚ್.ಟಿ. ಶಾಂತನಗೌಡ್ರು ಮತ್ತು ಮಕ್ಕಳು
- ಶ್ರೀಮತಿ ಶೈಲಜಾ ಶ್ರೀ ಹೆಚ್.ಟಿ. ಪರಮೇಶ್ವರಪ್ಪ ಮತ್ತು ಮಕ್ಕಳು
- ಶ್ರೀಮತಿ ಸೌಮ್ಯ ಶ್ರೀ ಹೆಚ್.ಹೆಚ್. ನಿರಂಜನ ಮತ್ತು ಮಕ್ಕಳು
- ಶ್ರೀಮತಿ ಸಿಂಧೂ ಶ್ರೀ ಹೆಚ್.ಹೆಚ್. ಆದಿತ್ಯ ಮತ್ತು ಮಕ್ಕಳು

ಊರಮುಂದ್ಲರ ದೊಡ್ಡಮನಿ ವಂಶಸ್ಥರು
ಹಳ್ಳಿಹಾಳ್ ಗ್ರಾಮಸ್ಥರು ಹಾಗೂ ಬಂಧು-ಮಿತ್ರರು ಫೋನ್ : 99028 56010

ವಿ.ಸೂ. : ಆತ್ಮೀಯರೇ ಇದನ್ನೇ ಆಹ್ವಾನವೆಂದು ಭಾವಿಸಿ, ಕಾರ್ಯಕ್ರಮಕ್ಕೆ ಆಗಮಿಸಬೇಕಾಗಿ ವಿನಂತಿ.


ಶ್ರೀ ಶ್ರೀಶೈಲ ಜಗದ್ಗುರು ವಾಗೀಶ ಪಂಡಿತಾರಾಧ್ಯ ಕೃಪಾಪೋಷಿತ
ಶ್ರೀ ವಿನಾಯಕ ಎಜುಕೇಷನ್ ಟ್ರಸ್ಟ್ (ರಿ)

SRI VINAYAKA EDUCATIONAL TRUST (R) ESTD 1980 DAVANGERE

## ಅಥಣಿ ಸಂಯುಕ್ತ ಪದವಿ ಪೂರ್ವ ಕಾಲೇಜು



ಎಸ್. ಎಸ್. ಬಡಾವಣೆ, 'ಎ' ಬ್ಲಾಕ್, ದಾವಣಗೆರೆ–577004
ಫೋನ್: 08192 – 297667 ಮೊ. : 8971599739 / 7892269326 / 9964756302


**2023–24ನೇ ಸಾಲಿನಲ್ಲಿ ದ್ವಿತೀಯ ಪಿ.ಯು.ಸಿ. ಪರೀಕ್ಷೆಯಲ್ಲಿ ಅತ್ಯುತ್ತಮ ಅಂಕ ಗಳಿಸಿದ ವಿದ್ಯಾರ್ಥಿಗಳು**

### TOPPERS OF OUR COLLEGE



Sharad Kumar — 588-98% Mats - Bio/cs - Eng. - 100
Ramya S R — 580-96.67% A/c. - B/s. - Stats - 100
Payal K P — 579 - 96.5%
Sri Raksha S — 573-95.5% A/c. - 100
Riya G R — 569-94.83% A/c. - Stats - 100
Arun V Gowda — 564 - 94% - Arts

### DISTINCTION HOLDERS IN SCIENCE



Deeksha B Begewadi 581 - 96.83%
B S Kavana 579 - 96.50%
Sinchana N Halepeti 579 - 96.50%
Lakshmiranganatha K M 578 - 96.33%


....More than Achievers

**Congratulations**
*to all Successfull Students who have brought credit to our college & their parents*
ಶ್ರೀ ವಿನಾಯಕ ಎಜುಕೇಷನ್ ಟ್ರಸ್ಟ್ ಆಡಳಿತ ಮಂಡಳಿ, ಪ್ರಾಂಶುಪಾಲರು, ಬೋಧಕರು ಮತ್ತು ಬೋಧಕೇತರ ವೃಂದ ಹಾಗೂ ವಿದ್ಯಾರ್ಥಿಗಳು


### DISTINCTION HOLDERS IN COMMERCE



Sanjana T 568 - 94.67%
Tanushree S Javali 561 - 93.5%
Bhavana D 558 - 93%
Girish L. 555 - 92.5%
Ramya B M 544 - 90.67%
Ankitha A V 543 - 90.5%
Bhoomika M Shet 538 - 89.67%



Chandana K S 537 - 89.5%
R Bindhu 536 - 89.3%
Sagar M Raikar 533 - 88.83%
Sangeetha R K 533 - 88.83%
Chinmay B B 527 - 87.83%
Shashank J S 522 - 87% A/c. - 100
Sanjay Kuriyar Manjappa 520 - 86.67%




Gaganshree T 518 - 86.33%
Darshan K N 517 - 86.17%
Adarsh R 515 - 85.83%
Usha K B 510 - 85%

Distinction - 177
First Class - 165
....More than Achievers

### DISTINCTION HOLDERS IN ARTS



Shreya S 550 - 91.67%
Radhika H N 547 - 91.17%
Ganesh E Chowan 544 - 90.67%
Manjunath N 544 - 90.67%
Preetham S 544 - 90.67%
Supritha D 540 - 90%



Nandini Shankpal 538 - 89.67%
Asha H 535 - 89.17%
Vathsala A 534 - 89%
Chandana C 520 - 86.67%
G T Deepa 518 - 86.33%
Megana M 511 - 85.17%



Amith D P 85.8%

**COMMERCE+ INTEGRATED WITH CA FOUNDATION**

**2024–25ನೇ ಸಾಲಿನ ಪ್ರಥಮ ಪಿ.ಯು.ಸಿ. ಪ್ರವೇಶ ಪ್ರಾರಂಭವಾಗಿದೆ**

✦ ವಿಭಾಗಗಳು : ಕಲಾ, ವಾಣಿಜ್ಯ ಹಾಗೂ ವಿಜ್ಞಾನ ✦ ಸಂಯೋಜನೆಗಳು : HESP, EBAS, EBACs, PCMB, PCMCs.

ಸೋಮವಾರದಿಂದ ಶುಕ್ರವಾರ ಬೆಳಿಗ್ಗೆ 10 ರಿಂದ ಸಂಜೆ 5ರ ವರೆಗೆ ಹಾಗೂ ಶನಿವಾರ ಬೆಳಿಗ್ಗೆ 10 ರಿಂದ ಮಧ್ಯಾಹ್ನ 2ರ ವರೆಗೆ ಕಛೇರಿ ತೆರೆದಿರುತ್ತದೆ.

ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾವಾಣಿ

1974 2023

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಭಾನುವಾರ, ಏಪ್ರಿಲ್ 14, 2024

☎ 08192 254736 91642 99999



ಶ್ರೀ ಬಕ್ಕೇಶ್ವರ ಸ್ವಾಮಿ ರಥೋತ್ಸವ

ದಾವಣಗೆರೆ ಚೌಕಿಪೇಟೆಯ ಶ್ರೀ ಗುರು ಶಿವಯೋಗಿ ಬಕ್ಕೇಶ್ವರ ಸ್ವಾಮಿ ರಥೋತ್ಸವವು ಶನಿವಾರ ರಾತ್ರಿ ವಿಜೃಂಭಣೆಯಿಂದ ನೆರವೇರಿತು.

## ಕಾಂಗ್ರೆಸ್‌ಗೆ 2019ಕ್ಕಿಂತ ಹೆಚ್ಚು ಸ್ಥಾನ: ಚಿದಂಬರ್

ಕೊಲ್ಕೊತಾ, ಏ. 13 – ಕಾಂಗ್ರೆಸ್ ಪಕ್ಷ 2019ರ ಲೋಕಸಭಾ ಚುನಾವಣೆಗಿಂತ ಹೆಚ್ಚು ಸ್ಥಾನ ಗಳಿಸಲಿದೆ ಎಂದು ಪಕ್ಷದ ಹಿರಿಯ ನಾಯಕ ಪಿ.ಚಿದಂಬರಂ ವಿಶ್ವಾಸ ವ್ಯಕ್ತಪಡಿಸಿದ್ದಾರೆ.



ಖಾಸಗಿ ಸುದ್ದಿಸಂಸ್ಥೆಯೊಂದಕ್ಕೆ ಸಂದರ್ಶನ ನೀಡಿರುವ ಅವರು, ತಮಿಳುನಾಡು ಹಾಗೂ ಕೇರಳಗಳಲ್ಲಿ ಐ.ಎನ್.ಡಿ.ಐ.ಎ. ಮೈತ್ರಿಕೂಟ ಭರ್ಜರಿ ಜಯ ಗಳಿಸಲಿದೆ ಎಂದು ಹೇಳಿದ್ದಾರೆ.

ಹಿಂದುತ್ವ ಇಲ್ಲವೇ ಹಿಂದೂಗಳು ಅಪಾಯದಲ್ಲಿ ಇಲ್ಲ. ಆ ರೀತಿ ಹೇಳುವುದು ಬಿಜೆಪಿಯ ತಂತ್ರಗಾರಿಕೆಯಾಗಿದೆ. ಪ್ರತಿಪಕ್ಷಗಳನ್ನು ಹಿಂದೂ ವಿರೋಧಿ ಎಂದು ಬಿಂಬಿಸುವ ಮೂಲಕ, ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರನ್ನು ಹಿಂದೂ ರಕ್ಷಕ ಎಂದು ಬಿಂಬಿಸಲಾಗುತ್ತಿದೆ ಎಂದು ಚಿದಂಬರಂ ಹೇಳಿದ್ದಾರೆ.

ಲೋಕಸಭಾ ಚುನಾವಣೆಯಲ್ಲಿ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಹಾಗೂ ಟಿಎಂಸಿ ನಾಯಕಿ ಮಮತಾ ಬ್ಯಾನರ್ಜಿ ಅವರು ಪ್ರಮುಖ ಪಾತ್ರ ವಹಿಸಿದ್ದಾರೆ. ಅವರು ರಾಜ್ಯದಲ್ಲಿ ಐ.ಎನ್.ಡಿ.ಐ.ಎ. ಮೈತ್ರಿಕೂಟ ಬಲಗೊಳಿಸಲಿದ್ದಾರೆ ಎಂದು ಚಿದಂಬರಂ ಹೇಳಿದ್ದಾರೆ.

ನಾನು ಎಲ್ಲಾ ರಾಜ್ಯಗಳ ಬಗ್ಗೆ ಮಾತನಾಡಲು ಸಾಧ್ಯವಿಲ್ಲ. ಆದರೆ, ತಮಿಳುನಾಡಿನಲ್ಲಿ ಭರ್ಜರಿ ಜಯ ಗಳಿಸಲಿದ್ದೇವೆ. ಕೇರಳದಲ್ಲಿ ಯು.ಡಿ.ಎಫ್. ಹಾಗೂ ಎಲ್.ಡಿ.ಎಫ್.ಗಳು ಎಲ್ಲಾ 20 (7ನೇ ಪುಟಕ್ಕೆ)

## ಕೆಫೆ ಸ್ಫೋಟ: ಉಗ್ರರು ಹತ್ತು ದಿನ ಕಸ್ಟಡಿಗೆ

**ಅಬ್ದುಲ್ ಮತೀನ್ ತಾಹಾ ಮತ್ತು ಮುಜಾವೀರ್ ಹುಸೇನ್ ಶಾಜೇಬ್ ಘಟನೆಯ ಪ್ರಮುಖ ಆರೋಪಿಗಳು**

ಬೆಂಗಳೂರು, ಏ. 13 - ರಾಮೇಶ್ವರಂ ಕೆಫೆ ಬಾಂಬ್ ಸ್ಫೋಟ ಘಟನೆಯ ಪ್ರಮುಖ ಉಗ್ರರಾದ ಅಬ್ದುಲ್ ಮತೀನ್ ತಾಹಾ ಮತ್ತು ಮುಸಾವೀರ್ ಹುಸೇನ್ ಶಾಜೇಬ್ ಅವರುಗಳನ್ನು 10 ದಿನಗಳ ಎನ್‌ಐಎ ಕಸ್ಟಡಿಗೆ ಒಪ್ಪಿಸಲಾಗಿದೆ.

ಆರೋಪಿಗಳ ವೈದ್ಯಕೀಯ ಪರೀಕ್ಷೆ ನಂತರ ನ್ಯಾಯಾಧೀಶರ ಮುಂದೆ ಹಾಜರುಪಡಿಸಿದಾಗ ಎನ್‌ಐಎ ಕಸ್ಟಡಿಗೆ ನೀಡಿ ಆದೇಶ ಮಾಡಿದರು.

ಮಂಗಳೂರು ಗೋಡೆ ಬರಹ ಪ್ರಕರಣದಲ್ಲಿಯೂ ಮತೀನ್ ಮತ್ತು ಮುಸಾವೀರ್ ಹೆಸರನ್ನು ಎರಡು ಮತ್ತು ಮೂರನೇ ಆರೋಪಿಗಳನ್ನಾಗಿ ಉಲ್ಲೇಖಿಸಲಾಗಿದೆ. ಮುಸಾವೀರ್ ಹಾಗೂ ಅಬ್ದುಲ್ ತಾಹಾ ಇಬ್ಬರೂ ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲ್ಲೂಕಿನವರು.

ದಕ್ಷಿಣ ಭಾರತದ ಇನ್ನೂ ಹಲವೆಡೆ ಬಾಂಬ್ ಸ್ಫೋಟಿಸುವ ಯೋಜನೆಯನ್ನು ಶಂಕಿತ ಭಯೋತ್ಪಾದಕರು ರೂಪಿಸಿದ್ದರು ಎಂಬುದು ವಿಚಾರಣೆಯಿಂದ ತಿಳಿದುಬಂದಿದೆ.

ರಾಮೇಶ್ವರಂ ಕೆಫೆ ಸ್ಫೋಟಕ್ಕೆ ಬಳಸಿದ ಬಾಂಬ್ ಅನ್ನು ಅಬ್ದುಲ್ ಮತೀನ್ ತಾಹಾ ಸಿದ್ಧಪಡಿಸಿದ್ದ. ಇಂಜಿನಿಯರಿಂಗ್ (7ನೇ ಪುಟಕ್ಕೆ)

## ನಾಯಿಕೊಡೆಗಳಂತೆ ಹುಟ್ಟಿಕೊಳ್ಳುವ ಬೇಸಿಗೆ ಶಿಬಿರಗಳು

ದಾವಣಗೆರೆ, ಏ.13- ಬೇಸಿಗೆ ಶಿಬಿರಗಳು ಮಕ್ಕಳಿಗೆ ಆತ್ಮವಿಶ್ವಾಸ, ಸ್ವಾತಂತ್ರ್ಯ, ಸಾಮಾಜಿಕ ಕೌಶಲ್ಯ, ನಾಯಕತ್ವ ಕೌಶಲ್ಯ ಮತ್ತು ದೈಹಿಕ ಸಾಮರ್ಥ್ಯವನ್ನು ಬೆಳೆಸಲು ಸಹಕಾರಿಯಾಗಿವೆ ಎನ್ನುವಲ್ಲಿ ಯಾವುದೇ ಅನುಮಾನವಿಲ್ಲ.

ಆದರೆ ಮಕ್ಕಳ ಪರೀಕ್ಷೆ ಮುಗಿದು ಬೇಸಿಗೆ ರಜೆ ಆರಂಭವಾಗುತ್ತಲೇ ಈ ಬೇಸಿಗೆ ಶಿಬಿರಗಳುನಾಯಿಕೊಡೆಗಳಂತೆ ಹುಟ್ಟಿಕೊಳ್ಳುತ್ತಿವೆ. ಇವುಗಳ ಪೈಕಿ ಹಣ ಮಾಡಲೆಂದೇ ಇರುವ ಶಿಬಿರಗಳೇ ಹೆಚ್ಚು.

**ಮಕ್ಕಳ ಸುರಕ್ಷಿತಗೆ ಹೊಣೆ ಯಾರು? ಪೋಷಕರೋ? ಅಧಿಕಾರಿಗಳೋ?**

ಪರೀಕ್ಷೆ ಮುಗಿದು ರಜಾ ದಿನಗಳು ಆರಂಭವಾಗುತ್ತಿದ್ದಂತೆಯೇ ಮಕ್ಕಳನ್ನು ಸಲುಹಲಾಗದೆಯೋ ಅಥವಾ ಮಕ್ಕಳಲ್ಲಿ ಕೌಶಲ್ಯ ವೃದ್ಧಿಗೊಳ್ಳಲೆಂದೋ ಸಮೀಪ ಯಾವುದಾದೊಂದು ಸಮ್ಮರ್ ಕ್ಯಾಂಪ್ ಇದೆಯೇ? ಎಂದು ನೋಡಲಾರಂಭಿಸುತ್ತಾರೆ. ಸೇರಿಸುತ್ತಾರೆಯೂ ಕೂಡ.

ಕರಾಟೆ, ಡ್ಯಾನ್ಸ್, ಏರೋಬಿಕ್ಸ್, ಅಬಾಕಸ್, ಒಂದು ದಿನದ ಹೊರ ಪ್ರವಾಸ, ನಿತ್ಯ ಮಕ್ಕಳಿಗೆ ತಿಂಡಿ ಕೊಡುವುದು. ಹೀಗೆ ಹಲವಾರು ಆಮಿಷಗಳ ಮೂಲಕ ಪೋಷಕರನ್ನು ಹಾಗೂ ಮಕ್ಕಳನ್ನು ಸೆಳೆಯಲಾಗುತ್ತದೆ.

ಆದರೆ ಈ ಶಿಬಿರಗಳು ಮಕ್ಕಳಿಗೆ ಎಷ್ಟು ಸುರಕ್ಷಿತ ಎಂಬುದೂ ಸಹ ಮುಖ್ಯ. ಸಾಮಾನ್ಯವಾಗಿ ಶಿಬಿರದಲ್ಲಿ 4 ವರ್ಷದ ಮಕ್ಕಳಿಂದ 15 ವರ್ಷದ ಮಕ್ಕಳನ್ನೂ ನೋಂದಾಯಿಸಿಕೊಳ್ಳಲಾಗುತ್ತದೆ. ಆದರೆ ನಾಲ್ಕು ಅಥವಾ ಐದು ವರ್ಷದ ಮಗು 15 ವರ್ಷದ ಮಗುವಿಗೆ ಸಮಾನವಾಗಿ ಶಿಬಿರದಲ್ಲಿ ಪಾಲ್ಗೊಳ್ಳಲು ಸಾಧ್ಯವೇ? ಶಿಬಿರಗಳಲ್ಲಿ ವಯಸ್ಸಿಗನುಗುಣವಾಗಿ ಶಿಕ್ಷಣ ನೀಡಲಾಗುತ್ತದೆಯೇ? ಈ ಬಗ್ಗೆ ಪೋಷಕರು ಗಮನಿಸಬೇಕಾಗುತ್ತದೆ. (7ನೇ ಪುಟಕ್ಕೆ)



ಸಂಗ್ರಹ ಚಿತ್ರ

### ಕಡಿಮೆ ದಿನದಲ್ಲಿ ಹೆಚ್ಚು ಲಾಭ !

ಹೆಚ್ಚಿನ ಶಿಬಿರಗಳು 15, 20 ಅಥವಾ 30 ದಿನಗಳ ವರೆಗೆ ನಡೆಯುತ್ತವೆ. ಪ್ರತಿ ವಿದ್ಯಾರ್ಥಿಗೆ ಕನಿಷ್ಠ 2 ರಿಂದ 3 ಸಾವಿರ ರೂ.ಗಳ ಶುಲ್ಕ ಪಡೆಯಲಾಗುತ್ತದೆ.

ಒಂದು ಶಿಬಿರದಲ್ಲಿ 50 ಮಕ್ಕಳು ನೋಂದಾಯಿಸಲ್ಪಟ್ಟರೆ ಪ್ರತಿ ಮಗುವಿಗೆ 3 ಸಾವಿರದಂತೆ ಒಂದೂವರೆ ಲಕ್ಷ ರೂಪಾಯಿ. ಅದೆ ಕೆಲವೇ ದಿನಗಳಿಗೆ.

ಸಂಗೀತ, ನೃತ್ಯ, ಕರಾಟೆ ಶಿಕ್ಷಕರಿಗೆಂದು ಹಣ ಕೊಟ್ಟರೂ ಕನಿಷ್ಠ ಲಕ್ಷ ರೂಪಾಯಿ ಉಳಿಸಿಕೊಳ್ಳಬಹುದು. ಈ ಹಿನ್ನೆಲೆಯಲ್ಲಿ ಶಿಬಿರಗಳ ಸಂಖ್ಯೆ ಹೆಚ್ಚಾಗುತ್ತಲೇ ಇದೆ.

ಹೆಚ್ಚಾಗುವುದಷ್ಟೇ ಅಲ್ಲ, ಬ್ರಾಂಚ್‌ಗಳೂ ಶುರುವಾಗಿವೆ? ಹೌದು, ಒಂದು ಶಿಬಿರವಲ್ಲ. ನಗರದ ಬೆಳವಣಿಗೆಯನ್ನೂ ಲಾಭವಾಗಿಸಿಕೊಳ್ಳುವ ಕೆಲವರು ಬೇರೆ ಬೇರೆ ಬಡಾವಣೆಗಳಲ್ಲಿ ಶಿಬಿರದ ಬ್ರಾಂಚ್‌ಗಳನ್ನು ಆರಂಭಿಸಲಿದ್ದಾರೆ. ಒಂದು ಕಡೆ ಮಕ್ಕಳ ಸಂಖ್ಯೆ ಕಡಿಮೆ ಇದ್ದರೆ ಅವರನ್ನು ಮತ್ತೊಂದು ಬ್ರಾಂಚ್‌ಗೆ ತಂದು ಶಿಬಿರ ನಡೆಸುವ ಕೆಲಸವೂ ಕೆಲವೆಡೆ ನಡೆಯುತ್ತದೆ.

### ಅಧಿಕಾರಿಗಳು ಗಮನ ಹರಿಸಲಿ

**ಒಂದು ಶಾಲೆ ಆರಂಭಿಸಬೇಕಾದರೆ ಹಲವಾರು ನಿಯಮಗಳನ್ನು ವಿಧಿಸಲಾಗುತ್ತದೆ. ಆದರೆ ಈ ಬೇಸಿಗೆ ಶಿಬಿರಗಳಿಗೆ ಮಾತ್ರ ಯಾವ ಪರವಾನಗಿಯೂ ಬೇಕಿಲ್ಲ. ಈ ಹಿನ್ನೆಲೆಯಲ್ಲಿ ಇವುಗಳಿಗೆ ಯಾರ ಕಡಿವಾಣವೂ ಇಲ್ಲವಾಗಿದೆ. ಮಕ್ಕಳ ಆರೋಗ್ಯದ ಹಿತದೃಷ್ಟಿಯಿಂದಲಾದರೂ ಶಿಕ್ಷಣ ಇಲಾಖೆ ಅಥವಾ ಜಿಲ್ಲಾಡಳಿತ ಈ ಬಗ್ಗೆ ಗಮನ ಹರಿಸುವುದು ಒಳಿತು.**

**ಪ್ರಸ್ತುತ ದಿನಗಳಲ್ಲಂತೂ ಬಿಸಿಲು ಹೆಚ್ಚಾಗಿದ್ದು, ಯುವಕರು, ನಡು ವಯಸ್ಕರೇ ಪರಿತಪಿಸುವಂತಾಗಿದೆ. ಶಿಬಿರ ನಡೆಯುವ ಸ್ಥಳಗಳಲ್ಲಿ ಶುದ್ಧ ಕುಡಿಯುವ ನೀರು ಸೇರಿದಂತೆ ಮೂಲ ಸೌಲಭ್ಯಗಳಿವೆಯೇ? ಮಕ್ಕಳ ಸಂಖ್ಯೆಗನುಗುಣವಾಗಿ ಜಾಗವಿದೆಯೇ? ಮಕ್ಕಳ ಪೋಷಕರಿಂದ ಒಪ್ಪಿಗೆ ಪತ್ರ ಪಡೆಯಲಾಗಿದೆಯೇ? ಪಡೆದ ಶುಲ್ಕಕ್ಕೆ ರಶೀದಿ ನೀಡಲಾಗಿದೆಯೇ? ಎಂಬ ಬಗ್ಗೆ ಪರಿಶೀಲಿಸಬೇಕಿದೆ. ಕೇವಲ ಹಣಕ್ಕಾಗಿ ಬೇಸಿಗೆ ಶಿಬಿರಗಳನ್ನು ನಡೆಸುವವರ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳಬೇಕಿದೆ.**

## ಸಮಗ್ರ ನೀರಾವರಿಗೆ ಒತ್ತಾಯಿಸಿ ಜಗಳೂರು ಬಂದ್ ಯಶಸ್ವಿ



ಜಗಳೂರು, ಏ.13- ಭದ್ರಾ ಮೇಲ್ದಂಡೆ ಯೋಜನೆ ಹಾಗೂ ಕೆರೆ ತುಂಬಿಸುವ ಯೋಜನೆ ಶೀಘ್ರ ಜಾರಿಗಾಗಿ ಒತ್ತಾಯಿಸಿ ತಾಲ್ಲೂಕಿನ ಭದ್ರಾ ಮೇಲ್ದಂಡೆ ನೀರಾವರಿ ಹೋರಾಟ ಸಮಿತಿ ಮತ್ತು 57 ಕೆರೆ ನೀರು ತುಂಬಿಸುವ ಯೋಜನೆ ಹೋರಾಟ ಸಮಿತಿ ಹಾಗೂ ವಿವಿಧ ಪ್ರಗತಿಪರ ಸಂಘಟನೆಗಳು ನೀಡಿದ್ದ "ಸ್ವಯಂಪ್ರೇರಿತ ಶಾಂತಿಯುತ ಬಂದ್" ಯಶಸ್ವಿಯಾಯಿತು.

ಪಟ್ಟಣದಲ್ಲಿ ಬೆಳಿಗ್ಗೆಯಿಂದ ಸಂಜೆ 5 ಗಂಟೆಯವರೆಗೂ ಅಂಗಡಿ ಮುಂಗಟು, ಸಂತೆ, ಬಸ್ ಸಂಚಾರ, ಸಂಪೂರ್ಣ ಸ್ಥಗಿತವಾಗಿತ್ತು. ವರ್ತಕರು, ವ್ಯಾಪಾರಿಗಳು, ಸಾರ್ವಜನಿಕರು ಬಂದ್‌ಗೆ ವ್ಯಾಪಕ ಬೆಂಬಲ ವ್ಯಕ್ತ ಪಡಿಸಿದರು.

ಪಟ್ಟಣ ವಾಹನ, ಜನದಟ್ಟಣೆಯಿಲ್ಲದೆ ಬಿಕೋ ಎನ್ನುತ್ತಿತ್ತು. ಕೇವಲ ಅಗತ್ಯ ವಸ್ತುಗಳಾದ ಮೆಡಿಕಲ್ ಸ್ಟೋರ್, ಆಸ್ಪತ್ರೆ, ಹಾಲು, ಪತ್ರಿಕೆ ವಹಿವಾಟು ಮಾತ್ರ ನಡೆದವು.

ವಿವಿಧ ಸಂಘಟನೆಗಳ ಮುಖಂಡರುಗಳು ಬೆಳಿಗ್ಗೆಯಿಂದ ಬಂದ್ ನಲ್ಲಿ ಸಕ್ರಿಯವಾಗಿ ಭಾಗವಹಿಸಿ ಸಂಜೆ 5 ಗಂಟೆಗೆ ಮಹಾತ್ಮಗಾಂಧಿ ವೃತ್ತದಲ್ಲಿ ಮಾನವ ಸರಪಳಿಯೊಂದಿಗೆ ಬಹಿರಂಗ ಸಭೆ ನಡೆಸಿ ಬಂದ್ ಯಶಸ್ವಿಗೊಳಿಸಿದರು.

**ಶಾಸಕರು ಭೇಟಿ, ಭರವಸೆ:** ಶಾಸಕ ಬಿ. ದೇವೇಂದ್ರಪ್ಪ ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿ ಮಾತನಾಡುತ್ತಾ, ನಾನು ಶಾಸಕನಾಗಿ ಆಯ್ಕೆಯಾದ ನಂತರ ಮೊದಲನೇ ಅಧಿವೇಶನದಲ್ಲಿ 57 ಕೆರೆ ತುಂಬಿಸುವ ಯೋಜನೆ ಕಾಮಗಾರಿ ಬಗ್ಗೆ ಧ್ವನಿ ಎತ್ತಿದ ಪರಿಣಾಮ ಶೇ.85 ರಷ್ಟು ಪೈಪ್ ಲೈನ್ ಕಾಮಗಾರಿ ಪ್ರಗತಿಯಲ್ಲಿದೆ. ಮುಂದಿನ ಒಂದು ತಿಂಗಳಲ್ಲಿ ಪೈಪ್ ಲೈನ್ ಕಾಮಗಾರಿ ಪೂರ್ಣಗೊಂಡು ಶೀಘ್ರದಲ್ಲಿ 11 ಕೆರೆಗಳಿಗೆ ನೀರು ಹರಿಸಲಾಗುವುದು (7ನೇ ಪುಟಕ್ಕೆ)

## ಜನಪರ ಯೋಜನೆ ಕಾರ್ಯರೂಪಕ್ಕೆ ತರಲು ಕಾಂಗ್ರೆಸ್‌ಗೆ ಮತ: ಡಾ.ಪ್ರಭಾ



**ಹರಿಹರ ತಾಲ್ಲೂಕಿನ ಗ್ರಾಮಗಳ ಪ್ರಚಾರ ಸಭೆಯಲ್ಲಿ ಡಾ. ಪ್ರಭಾ ಮಲ್ಲಿಕಾರ್ಜುನ್**

ಹರಿಹರ, ಏ.,13- ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ಬಡವರಿಗೆ ದಲಿತರಿಗೆ, ಶೋಷಿತರಿಗೆ ಮತ್ತು ಮಹಿಳೆಯರಿಗೆ ಅನೇಕ ಜನಪರ ಯೋಜನೆಗಳನ್ನು ಘೋಷಣೆ ಮಾಡಿದ್ದು, ಅವುಗಳನ್ನು ಕಾರ್ಯರೂಪಕ್ಕೆ ತರಲು ಜನರು ಕಾಂಗ್ರೆಸ್ ಪಕ್ಷದ ಹಸ್ತದ ಗುರುತಿಗೆ ಮತ ಹಾಕುವ ಮೂಲಕ ಜಿಲ್ಲೆಯಲ್ಲಿ ಕಾಂಗ್ರೆಸ್ ಧ್ವಜ ಹಾರಿಸುವಂತೆ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ಮನವಿ ಮಾಡಿದರು.

ತಾಲ್ಲೂಕಿನ ಕೊಂಡಜ್ಜಿ, ಬಸಾಪುರ, ಕರಲಹಳ್ಳಿ, ಸಾರಥಿ, ಪಾಮೇನಹಳ್ಳಿ, ದೀಟೂರು, ಗಂಗನಹರಸಿ, ಕುರುಬರಹಳ್ಳಿ ಭಾಗಗಳಲ್ಲಿ ಪ್ರಚಾರ ಮಾಡಿ ಅವರು ಮಾತನಾಡಿದರು.

ಜಿಲ್ಲೆಯ ಸಮಗ್ರ ಅಭಿವೃದ್ಧಿಗಾಗಿ ಕಾಂಗ್ರೆಸ್ ಪಕ್ಷ ಸಾಕಷ್ಟು ಕೆಲಸ, ಕಾರ್ಯಗಳನ್ನು ಮಾಡುತ್ತಾ ಬಂದಿದ್ದರಿಂದ ಜಿಲ್ಲೆಯ ಎಂಟು ತಾಲ್ಲೂಕುಗಳ ಏಳು ವಿಧಾನಸಭಾ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಪಕ್ಷದ ಶಾಸಕರು ಆಯ್ಕೆಯಾಗಿದ್ದಾರೆ. ಜಿಲ್ಲೆಯ ಅಭಿವೃದ್ಧಿಗೆ ರಾಜ್ಯ ಸರ್ಕಾರದ ಅನುದಾನ ಇದ್ದರೆ ಸಾಲದು, ಕೇಂದ್ರ ಸರ್ಕಾರದ ಅನುದಾನ ಕೂಡಾ ಹೆಚ್ಚು ಬಂದಾಗ ಜಿಲ್ಲೆಯ ಜನತೆಗೆ ಅಭಿವೃದ್ಧಿ ಕಾರ್ಯಗಳನ್ನು ಮಾಡಲಿಕ್ಕೆ ಸಾಧ್ಯವಾಗುತ್ತದೆ. ಜೊತೆಗೆ ಭ್ರಷ್ಟಾಚಾರ ರಹಿತ, ಜನಪರ ಆಡಳಿತಕ್ಕಾಗಿ ಕಾಂಗ್ರೆಸ್ ಪಕ್ಷಕ್ಕೆ ಮತವನ್ನು ಹಾಕುವ ಮೂಲಕ ತಮ್ಮ ಸೇವೆಗೆ ಅವಕಾಶ ಕಲ್ಪಿಸಿಕೊಡಬೇಕು ಎಂದು ಹೇಳಿದರು.

ಈಗಾಗಲೇ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ವತಿಯಿಂದ ದೇಶದ ಸಮಗ್ರ ಅಭಿವೃದ್ಧಿ ಚಿಂತನೆ ಅಡಿಯಲ್ಲಿ ಸುಮಾರು 25ಕ್ಕೂ ಹೆಚ್ಚು ಗ್ಯಾರಂಟಿ ಯೋಜನೆಗಳನ್ನು ರೂಪಿಸ ಲಾಗಿದೆ, ಅದರಲ್ಲಿ ಮಹಿಳೆಯರ ಸಬಲೀಕರಣಕ್ಕಾಗಿ 1 ಲಕ್ಷ ರೂಪಾಯಿ ಸೇರಿದಂತೆ ವಿಶೇಷ ಯೋಜನೆಗಳನ್ನು ರೂಪಿಸಿದೆ. ಜೊತೆಗೆ ದಲಿತರಿಗೆ, ರೈತರಿಗೆ, ಬಡ ಶೋಷಿತ, ಹಿಂದುಳಿದ ವರ್ಗದವರಿಗೆ ಮೂಲಭೂತ ಸೌಕರ್ಯ ಗಳನ್ನು ಒದಗಿಸುವ ಮೂಲಕ ಅವರನ್ನು ಆರ್ಥಿಕವಾಗಿ ಸಬಲರನ್ನಾಗಿ ಮಾಡುವುದಕ್ಕೆ ಮುಂದಾಗಿದೆ. ಈಗಾಗಲೇ ನಮ್ಮ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷವು ಎಂಟು ತಿಂಗಳ ಆಡಳಿತ ಅವಧಿಯಲ್ಲಿ ಜನರ ಕಷ್ಟಗಳಿಗೆ ಸ್ಪಂದಿಸುವ ಮೂಲಕ, ಶಕ್ತಿ ಯೋಜನೆ, ಗೃಹ ಜ್ಯೋತಿ, ಅನ್ನಭಾಗ್ಯ, ಗೃಹ ಲಕ್ಷ್ಮಿ, ಯುವನಿಧಿ ಯೋಜನೆಗಳನ್ನು ಕಾರ್ಯರೂಪಕ್ಕೆ ತಂದು ನುಡಿದಂತೆ ನಡೆದಿದ್ದು, ಅದರಂತೆ ಕೇಂದ್ರದಲ್ಲಿ ಆಡಳಿತಕ್ಕೆ ಬಂದಾಗ ಇನ್ನಷ್ಟು ಅಭಿವೃದ್ಧಿಯ ಪರ್ವವನ್ನು ಆರಂಭಿಸಲಿದೆ ಎಂದು ಹೇಳಿದರು.

ಈ ವೇಳೆ ಕೊಂಡಜ್ಜಿ, ಕುರುಬರಹಳ್ಳಿ ಸಾರಥಿ ಗ್ರಾಮದಲ್ಲಿ ಹಲವಾರು ಮುಖಂಡರು ಬಿಜೆಪಿ ಮತ್ತು ಜೆಡಿಎಸ್ ಪಕ್ಷವನ್ನು ತೊರೆದು ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾದರು.

ಈ ವೇಳೆ ಮಾಜಿ ಶಾಸಕ ಎಸ್. ರಾಮಪ್ಪ, ಕಾಂಗ್ರೆಸ್ ಮುಖಂಡರಾದ ನಂದಿಗಾವಿ ಶ್ರೀನಿವಾಸ್, ಗುತ್ತೂರು ಜಿ.ಬಿ. ಹಾಲೇಶಗೌಡ್ರು, ಜಿಲ್ಲಾ ಯುವ ಕಾಂಗ್ರೆಸ್ ಪಕ್ಷದ ಅಧ್ಯಕ್ಷ ನಿಖಿಲ್ ಕೊಂಡಜ್ಜಿ, ವಕೀಲ ಎಂ. (7ನೇ ಪುಟಕ್ಕೆ)

## ಹರಪನಹಳ್ಳಿಯಲ್ಲಿ ಇಂಡಿಯಾ ರಿಸರ್ವ್ ಬೆಟಾಲಿಯನ್ ಸ್ಥಾಪನೆ ನನ್ನ ಆದ್ಯತೆ

**ಹರಪನಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಮತಪ್ರಚಾರ, ಮಾಜಿ ಸಚಿವ ಕರುಣಾಕರ ರೆಡ್ಡಿ ಸಾಥ್**

ಹರಪನಹಳ್ಳಿ, ಏ. 13- ಕರ್ನಾಟಕ ರಾಜ್ಯದಲ್ಲಿರುವ 12 ಕೆ.ಎಸ್.ಆರ್.ಪಿ. ತುಕಡಿಗಳ ಹೊರತಾಗಿ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ನಿಭಾಯಿಸುವ ನಿಟ್ಟಿನಲ್ಲಿ ಎರಡು ಇಂಡಿಯಾ ರಿಸರ್ವ್ ಬೆಟಾಲಿಯನ್ ಸ್ಥಾಪನೆ ಮಾಡುವ ಪ್ರಸ್ತಾವನೆ ಕೇಂದ್ರ ಗೃಹ ಸಚಿವಾಲಯದ ಹಂತದಲ್ಲಿದೆ ಎಂದು ದಾವಣಗೆರೆ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಗಾಯಿತ್ರಿ ಸಿದ್ದೇಶ್ವರ್ ಹೇಳಿದರು.

ಹರಪನಹಳ್ಳಿ ವಿಧಾನಸಭಾ ಕ್ಷೇತ್ರದ ಶಿಂಗ್ರಿಹಳ್ಳಿಯಲ್ಲಿ ಮತ ಯಾಚನೆ ಮಾಡಿ ಮಾತನಾಡಿದ ಅವರು, ಸಂಸದ ಜಿ. ಎಂ.ಸಿದ್ದೇಶ್ವರ ಅವರು ಹರಪನಹಳ್ಳಿಯಲ್ಲಿ ಇಂಡಿಯಾ ರಿಸರ್ವ್ ಬೆಟಾಲಿಯನ್ ಸ್ಥಾಪನೆ ಮಾಡುವ ಉದ್ದೇಶದಿಂದ ಸಮಗ್ರ ಯೋಜನಾ ವರದಿ ಸಿದ್ದಪಡಿಸಿ, ರಾಜ್ಯ ಸರ್ಕಾರದ ಮುಖಾಂತರ ಕೇಂದ್ರ ಗೃಹ ಇಲಾಖೆಗೆ ಕಳುಹಿಸಿ, ಗೃಹ ಸಚಿವ ಅಮಿತ್ ಷಾ ರವರನ್ನು ಭೇಟಿ ಮಾಡಿ, ಹರಪನಹಳ್ಳಿಗೆ ಘಟಕ ಮಂಜೂರು ಮಾಡುವಂತೆ ಮನವಿ ಮಾಡಿದ್ದಾರೆ ಎಂದು ತಿಳಿಸಿದರು.

ಸಂಸದರ ಮನವಿಗೆ ಪೂರಕವಾಗಿ ಸ್ಪಂದಿಸಿರುವ ಗೃಹ ಸಚಿವರು, ಮಂಜೂರಾತಿ ಮಾಡಿಕೊಡುವುದಾಗಿ ಭರವಸೆ ನೀಡಿದ್ದಾರೆ. ಚುನಾವಣೆ ಪ್ರಕ್ರಿಯೆ ಮುಗಿದ ನಂತರ ಹರಪನಹಳ್ಳಿಯಲ್ಲಿ ಇಂಡಿಯಾ ರಿಸರ್ವ್ ಬೆಟಾಲಿಯನ್ ಸ್ಥಾಪನೆಗೆ ಪ್ರಥಮ ಆದ್ಯತೆ ಮೇಲೆ ಚಾಲನೆ ನೀಡಲಾಗುವುದು ಎಂದರು.

ಹರಪನಹಳ್ಳಿ ತಾಲ್ಲೂಕು ವಿಜಯನಗರ ಜಿಲ್ಲೆಗೆ ಸೇರಿದ್ದರೂ, ಈ ಕ್ಷೇತ್ರದ ಜನ ದಾವಣಗೆರೆಯೊಂದಿಗೆ ಭಾವನಾತ್ಮಕ ಸಂಬಂಧ ಹೊಂದಿದ್ದಾರೆ. ನಮಗೂ ಕೂಡ ಈ ಕ್ಷೇತ್ರದ ಮೇಲೆ ವಿಶೇಷವಾದ ಅಭಿಮಾನವಿದೆ, ನಿಮ್ಮೆಲ್ಲ ಕಷ್ಟ ಸುಖಗಳಿಗೆ ನಾವು ಸ್ಪಂದಿಸಿದ್ದೇವೆ. ಮುಂಬರುವ ದಿನಗಳಲ್ಲಿ ಪ್ರತಿ ವಿಧಾನಸಭಾ ಕ್ಷೇತ್ರಗಳಲ್ಲಿ ಜನಸಂಪರ್ಕ ಕಚೇರಿ ತೆರೆಯುವ ಉದ್ದೇಶ ನನಗಿದ್ದು, ಸಾರ್ವಜನಿಕ ಕೆಲಸಗಳಿಗೆ ವೃಥಾ ದಾವಣಗೆರೆಗೆ ಬರುವುದು ಇನ್ನು ಮುಂದೆ ತಪ್ಪಲಿ ಎನ್ನುವ ಉದ್ದೇಶ ನನ್ನದು. ಹರಪನಹಳ್ಳಿ ನಗರದಲ್ಲಿಯೇ ಜನಸಂಪರ್ಕ ಕಚೇರಿ ತೆರೆದು ಅಲ್ಲಿ ಸಿಬ್ಬಂದಿ ನೇಮಿಸಲಾಗುವುದು. ನಾನೂ ಕೂಡ ನಿರಂತರವಾಗಿ ಜನಸಂಪರ್ಕ ಕಚೇರಿಗೆ ಆಗಮಿಸಿ ಜನರ ಕಷ್ಟ ಸುಖಗಳನ್ನು ಆಲಿಸುತ್ತೇನೆ ಎಂದರು.

ಹರಪನಹಳ್ಳಿ ಕ್ಷೇತ್ರದಲ್ಲಿ ಸಂಸದ ಜಿ. ಎಂ.ಸಿದ್ದೇಶ್ವರ ಅವರು ಈಗಾಗಲೇ ಮಾಜಿ ಸಚಿವರಾದ ಕರುಣಾಕರ ರೆಡ್ಡಿ ಅವರ ಜೊತೆಗೂಡಿ ಸಾಕಷ್ಟು (7ನೇ ಪುಟಕ್ಕೆ)



## ಕಣದಿಂದ ಹಿಂದೆ ಸರಿಯಲ್ಲ : ಈಶ್ವರಪ್ಪ

ಶಿವಮೊಗ್ಗ, ಏ. 13 -ಲೋಕಸಭಾ ಚುನಾವಣಾ ಕಣದಿಂದ ಹಿಂದಕ್ಕೆ ಸರಿಯುವುದಿಲ್ಲ ಎಂದು ಶಿವಮೊಗ್ಗದಲ್ಲಿ ಬಂಡಾಯ ಅಭ್ಯರ್ಥಿಯಾಗಿ ಕಣಕ್ಕಿಳಿದಿರುವ ಕೆ.ಎಸ್. ಈಶ್ವರಪ್ಪ ಹೇಳಿದ್ದಾರೆ.

ಬಂಡಾಯ ಬಿಜೆಪಿ ಅಭ್ಯರ್ಥಿಯಾಗಿರುವ ಈಶ್ವರಪ್ಪ, ಪಕ್ಷೇತರರಾಗಿ ಕಣಕ್ಕಿಳಿದಿದ್ದಾರೆ. ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರನ್ನು ಬಲಪಡಿಸುವುದೇ ನನ್ನ ಉದ್ದೇಶ ಎಂದು ಈಶ್ವರಪ್ಪ ಹೇಳಿದ್ದಾರೆ. ನಾನು ನಾಮಪತ್ರ ವಾಪಸ್ ಪಡೆಯುತ್ತಿದ್ದೇನೆ ಎಂದು ಕೆಲವರು ವದಂತಿ ಹರಡಿದ್ದಾರೆ.

## ರೈತರ ಸಾಲ ಮನ್ನಾ : ರಾಹುಲ್ ಭರವಸೆ

ಭಾಂದ್ರಾ, ಏ. 13 – ಕಾಂಗ್ರೆಸ್ ಪಕ್ಷ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದಲ್ಲಿ ರೈತರ ಸಾಲ ಮನ್ನಾ ಮಾಡಲಾಗುವುದು ಎಂದು ಪಕ್ಷದ ನಾಯಕ ರಾಹುಲ್ ಗಾಂಧಿ ಹೇಳಿದ್ದಾರೆ. ಮಹಾರಾಷ್ಟ್ರದ ಸಕೋಲಿಯಲ್ಲಿ ನಡೆದ ಚುನಾವಣಾ ಸಮಾವೇಶದಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ರೈತರ ಸಾಲ ಮನ್ನಾ ಮಾಡಲಾಗುವುದು. ರೈತರ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆಗೆ ಕಾನೂನು ಸ್ವರೂಪ ನೀಡಲಾಗುವುದು ಎಂದು ಹೇಳಿದರು.

## ಇಂದು ಬಿಜೆಪಿ ಪ್ರಣಾಳಿಕೆ

ಲೋಕಸಭಾ ಚುನಾ ವಣೆಗಾಗಿ ಬಿಜೆಪಿ ತನ್ನ ಪ್ರಣಾಳಿಕೆ ಯಾದ ಸಂಕಲ್ಪ ಪತ್ರ' ವನ್ನು ಭಾನುವಾರ ಬಿಡುಗಡೆ ಮಾಡಲಿದೆ. ಈ ಪ್ರಣಾಳಿಕೆಯಲ್ಲಿ ವಿಕಸಿತ ಭಾರತದ ಮಾರ್ಗಸೂಚಿ ಪ್ರಮುಖ ಅಂಶವಾಗಿರುವ ನಿರೀಕ್ಷೆ ಇದೆ. ಪ್ರಧಾನ ಮಂತ್ರಿ ನರೇಂದ್ರ ಮೋದಿ ಹಾಗೂ ಪಕ್ಷದ ಹಿರಿಯ ನಾಯಕರು ಪ್ರಣಾಳಿಕೆ ಬಿಡುಗಡೆ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಸಂವಿಧಾನ ಶಿಲ್ಪಿ ಬಿ.ಆರ್. ಅಂಬೇಡ್ಕರ್ ಅವರ ಜನ್ಮ ದಿನದಂದು ಬಿಜೆಪಿಯ ಸಂಕಲ್ಪ ಪತ್ರ ಬಿಡುಗಡೆ ಮಾಡಲಾಗುತ್ತಿದೆ.

# THE TEAM ACADEMY

## THE TEAM PU COLLEGE

THE TEAM ACADEMY

Davangere : Vidyanagara BIET Road, Anjaneya Badavane
Shivamogga : 2nd Stage, Ravindra Nagar, Savalanga Road

**Registrations Open 2024-25 for 1st PUC PCMB & PCMCs**

**Scholarship Test - 2024**

for 1st PUC Admission (10th STATE , CBSE & ICSE)

**Test Dates : From 14th April to 21st April 2024**

Scan & Register online

## MBBS Seats Secured - 2023

Rashmi M G 634

Pavithra H N 625

Arpitha N 618

Nagadeepika M 610

Manoj J T 609

Khushi V H 604

Arpitha N – MMC Mysore
Siddarth U M – MMC Mandya
Nagadeepika M – SIMS Shivamogga
Khushi V H – SIMS Shivamogga
Pradeepa B S – SIMS Shivamogga
Deepashree J – JJM Davangere
Bharath Ganter – SSIMS Davangere
Sanjana T – SSIMS Davangere
Shivani P J – SSIMS Davangere
Rashmi M G – SABVMCRI Bengaluru
Manoj J T – SABVMCRI Bengaluru
Neha M G – AMC Bengaluru
Druvika Dixit – AMC Bengaluru
Kavya D K – GIMS Gadag
Gutyamma A K – GIMS Gadag
Soujanya N – GIMS Gadag
Sumalatha C – GIMS Gulbarga
Pooja N – GIMS Gulbarga
Yuvraj K P – HIMS Haveri
Satvika – HIMS Haveri
Mamatha K – HIMS Haveri
Darshan B K – KIMS Mangaluru
BIMS Belgaum
Monika H R – BIMS Chitradurga
Varshni Y Naik – YIMS Yadgiri
Darshan H – KIMS Karwar
Chetan Ram – VIMS Ballari
Kampan Naik – VIMS Ballari
Bhagyashree G P – CIMS Chikkamagaluru
Tejaswini P M – CIMS Chikkamagaluru
Srinivas M – CIMS Chikkaballapura
Suresh B S – CIMS Chamarajapete

## Achievers in JEE Advanced, Mains & K-CET

### JEE Mains Toppers - 2024

SESSION -1

99.16 Percentile – PAKKIRESH .T

98.90 Percentile – LINGARAJ R M

Rajath T B 97.94 Percentile
Veeresh Patil 97.83 Percentile
Tejas T 97.52 Percentile
Charandev M R 97.16 Percentile
Ruthu D Rao 97.11 Percentile
Sandesh M H 97.07 Percentile

### JEE Mains - 2024 Session - 1

Pakkiresh T 99.16 Percentile
Lingaraj R M 98.90 Percentile
Rajath T B 97.94 Percentile
Veeresh Patil 97.83 Percentile
Tejas T 97.52 Percentile
Charandev M R 97.16 Percentile
Ruthu D Rao 97.11 Percentile
Sandesh M H 97.07 Percentile
Kushal A 96.33 Percentile
Atheeth 96.09 Percentile
Akash B B 95.89 Percentile
Kavana P 95.78 Percentile
Rajendra B S 95.12 Percentile
Sri Balaji 94.70 Percentile
Deeksha H 94.52 Percentile
Ananya S 94.48 Percentile
Harshavardhan 93.98 Percentile
Suprith D K 93.77 Percentile
93.57 Percentile
Shivakumar 92.75 Percentile
Manoj T L 92.73 Percentile
Murali B K 92.60 Percentile
Vinay H 92.40 Percentile
Vishnu S 92.21 Percentile
Nevaditha B K 92.15 Percentile
Nanditha N 91.46 Percentile
Manoj Gowda 91.19 Percentile
Varshan Kumar 91.15 Percentile
Rahul K 90.54 Percentile
Tippesh C 90.00 Percentile
Mahesh N P 89.48 Percentile
Nithya G Y 89.24 Percentile
Harshini H S 89.08 Percentile
Tanuja D 89.07 Percentile
Anushree
Ashwini
Basavaraj
Chaitra N
Dayana Bani
Harsha K
Harshitha
Nitha P N
Jeevan N S
Keerthi C
Nimish S
Pavithra B M
Pooja C K
Pooja M N
Sparsha R C
Rabiya
Rohini H
Sampreeth T
Shalini C
Shamana Patil
Shivani B
Sinchana D
Sonia U M
Sourabh S
Spoorthi S
Spoorthi T
Srujan P Naik
Supriya S
Suraksha
Syed Yasmin
Thilak S B
Varsha B
Narmada
Hasan Raiz
David
Asha U S
Rachana
Kavyashree
Kuldeep
Rohan M S

### K-CET Toppers - 2023

Chaitanya A S – RV College Bengaluru (C S)
Adithi Palankar – RV College Bengaluru (B. Arch)
Shashank N – RV College Bengaluru (B. Tech)
Jeevan B N – M S Ramaiah Bengaluru (E & C)
Gowri T G – M S Ramaiah Bengaluru (AIML)
Sangeetha B A – PESIT Bengaluru (C S)
REVA Bengaluru (I S)
Rakshitha V – REVA Bengaluru
Likitha M S – JSS Bengaluru (E & C)
Sagar M S – JSS Mysore (C S)
Suraj M S – NIE Mysore (I S)

### JEE Advanced Toppers - 2023

Pradeepa B S AIR- 181

Soujanya N AIR- 952

Sanjana T AIR- 4152

**www.theteamacademy.org**

Davangere : 9035006723, 9035006724, 9035109411, 9900565795, 9538546758

Shivamogga : 9035006726, 9035006727, 9902303441, 9963505593, 9591319279

# ಉಗ್ರರು ಹತ್ತು ದಿನ ಕಸ್ಟಡಿಗೆ

**(5ನೇ ಪುಟದಿಂದ)** ಪದವೀಧರ ನಾಗಿದ್ದ ಈತ ಬಾಂಬ್ ತಯಾರಿಕೆ ಮಾಹಿತಿ ಹೊಂದಿದ್ದ, ಇತರರಿಗೂ ತರಬೇತಿ ನೀಡುತ್ತಿದ್ದ.

ತಾಹಾ ಸಿದ್ಧಪಡಿಸಿದ ಬಾಂಬ್ ಅನ್ನು ಮುಸಾವೀರ್, ರಾಮೇಶ್ವರಂ ಕೆಫೆಯಲ್ಲಿ ಇಟ್ಟಿದ್ದ ಎಂದು ವಿಚಾರಣೆಯಿಂದ ತಿಳಿದುಬಂದಿದೆ. ಸ್ಫೋಟ ನಡೆಸಿದ ಆರೋಪಿಗಳಿಬ್ಬರೂ ನಕಲಿ ಹೆಸರುಗಳಿಂದ ತಲೆ ಮರೆಸಿಕೊಂಡಿದ್ದರು, ಒಂದೊಂದು ಕಡೆ ಒಂದೊಂದು ನಕಲಿ ಹೆಸರನ್ನು ಬಳಸುತ್ತಿದ್ದರು.

ಗುರುತು ಮರೆಮಾಚಲು ನಕಲಿ ಆಧಾರ್ ಕಾರ್ಡ್‌ಗಳನ್ನು ಬಳಕೆ ಮಾಡುತ್ತಿದ್ದರು, ನಕಲಿ ಕಾರ್ಡ್‌ಗಳ ಬಳಕೆಯೇ ಆರೋಪಿಗಳ ಬಂಧನಕ್ಕೆ ಪ್ರಮುಖ ಕಾರಣಗಳಲ್ಲಿ ಒಂದಾಗಿದೆ.

ಒಡಿಶಾ ಹಾಗೂ ಪಶ್ಚಿಮ ಬಂಗಾಳದಲ್ಲಿ ವಾಸಿಸುತ್ತಿರುವ ಬಾಂಗ್ಲಾದೇಶದ ಅಕ್ರಮ ವಲಸಿಗರು ಹೆಚ್ಚಾಗಿ ನಕಲಿ ಆಧಾರ್ ಕಾರ್ಡ್‌ಗಳನ್ನೇ ಬಳಸುತ್ತಿದ್ದು, ರಾಮೇಶ್ವರಂ ಕೆಫೆ ಬಾಂಬ್ ಸ್ಫೋಟ ಆರೋಪಿಗಳೂ ಇದೇ ಪ್ರದೇಶದಲ್ಲಿ ಅಡಗಿರಬಹುದೆಂಬ ಶಂಕೆ ಇತ್ತು.

ಆರೋಪಿ ಮುಸಾವೀರ್ ಹುಸೇನ್ ಶಾಜೀಬ್ ಮಧ್ಯಮ ವರ್ಗದ ಕುಟುಂಬಕ್ಕೆ ಸೇರಿದವನಾಗಿದ್ದು, ತೀರ್ಥಹಳ್ಳಿಯಲ್ಲಿ ಈತನ ತಾಯಿ ವಾಸವಾಗಿದ್ದಾರೆ. ಮನೆ ಬಾಡಿಗೆಯೇ ಕುಟುಂಬದ ಆದಾಯದ ಮೂಲವಾಗಿದೆ, ಈತ ಸ್ಥಳೀಯರೊಂದಿಗೆ ಹೆಚ್ಚು ಬೆರೆಯುತ್ತಿರಲಿಲ್ಲ, ತನ್ನ ಸಮುದಾಯದವರು ಇರುವ ಒಂದೆರಡು ಪ್ರದೇಶಗಳಲ್ಲಿ ಮಾತ್ರ ತಿರುಗಾಡುತ್ತಿದ್ದ ಎಂದು ತಿಳಿದುಬಂದಿದೆ.

ಇನ್ನೊಬ್ಬ ಆರೋಪಿ ಅಬ್ದುಲ್ ಮತೀನ್ ತಾಹಾ ತಂದೆ ವರ್ಷದ ಹಿಂದೆ ಮೃತಪಟ್ಟಿದ್ದು, ತಾಹಾ ತೀರ್ಥಹಳ್ಳಿಯಲ್ಲಿ ಪ್ರೌಢಶಾಲೆ ವ್ಯಾಸಂಗ ಮುಗಿಸಿ, ಬೆಂಗಳೂರಲ್ಲಿ ಇಂಜಿನಿಯರಿಂಗ್ ಪದವಿ ಪಡೆದಿದ್ದ.

ಈತ ಬೆಂಗಳೂರಿನಲ್ಲೇ ಉಗ್ರರ ಸಂಪರ್ಕಕ್ಕೆ ಬಂದಿದ್ದು, ಐಇಡಿ ಬಾಂಬ್ ತಯಾರಿಕೆಯಲ್ಲಿ ನಿಪುಣನಾಗಿದ್ದ. ಮಂಗಳೂರು ಕುಕ್ಕರ್ ಬ್ಲಾಸ್ಟ್, ಶಿವಮೊಗ್ಗ ಟ್ರಯಲ್ ಬ್ಲಾಸ್ಟ್‌ಗಳ ಮಾಸ್ಟರ್‌ಮೈಂಡ್ ಆಗಿದ್ದ ತಾಹಾ, ಕಳೆದ ನಾಲ್ಕು ವರ್ಷಗಳಿಂದ ನಾಪತ್ತೆಯಾಗಿದ್ದ. ಈತನ ಪತ್ತೆಗೆ ಮೂರು ಲಕ್ಷ ರೂ. ಬಹುಮಾನ ಘೋಷಿಸಲಾಗಿತ್ತು. ರಾಮೇಶ್ವರಂ ಕೆಫೆ ಸ್ಫೋಟ ನಂತರ ಈ ಮೊತ್ತವನ್ನು ಹತ್ತು ಲಕ್ಷ ರೂ.ಗಳಿಗೆ ಏರಿಸಲಾಗಿತ್ತು.

ಕೊಲ್ಕೊತ್ತಾದಲ್ಲಿ ತಲೆಮರೆಸಿಕೊಂಡಿದ್ದ ಆರೋಪಿಗಳು, ಒಂದೇ ಕಡೆ ಇರದೆ ಲಾಡ್ಜ್‌ಗಳನ್ನು ಬದಲಿಸುತ್ತಿದ್ದರು. ಪ್ರತಿ ಎರಡು, ಮೂರು ದಿನಗಳಿಗೊಮ್ಮೆ ವಾಸ್ತವ್ಯ ಬದಲಿಸುತ್ತಿದ್ದರು ಎಂಬುದು ತನಿಖೆಯಿಂದ ತಿಳಿದುಬಂದಿದೆ.

# ಜನಪರ ಯೋಜನೆ ಕಾರ್ಯರೂಪಕ್ಕೆ ತರಲು ಕಾಂಗ್ರೆಸ್‌ಗೆ ಮತ: ಡಾ.ಪ್ರಭಾ

**(5ನೇ ಪುಟದಿಂದ)** ನಾಗೇಂದ್ರಪ್ಪ, ಕೆ.ಪಿ.ಸಿ.ಸಿ. ಸದಸ್ಯ ಬಿ. ರೇವಣಸಿದ್ದಪ್ಪ, ಎಪಿಎಂಸಿ ಮಾಜಿ ಅಧ್ಯಕ್ಷ ಮಂಜುನಾಥ್ ಪಾಟೀಲ್ ಕುಮಾರನಳ್ಳಿ, ಮಾಜಿ ಜಿಪಂ ಸದಸ್ಯ ಬೆಣ್ಣೆಹಳ್ಳಿ ಹಾಲೇಶಪ್ಪ ಮಲೆಬೆನ್ನೂರು, ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಡಿ. ಕುಮಾರ್ ಹನಗವಾಡಿ, ಮಾಜಿ ನಗರಸಭೆ ಅಧ್ಯಕ್ಷ ಕೃಷ್ಣ ಸಾ ಭೂತೆ, ಇತರರು ಮಾತನಾಡಿದರು.

ಈ ಸಂದರ್ಭದಲ್ಲಿ ಮಲೆಬೆನ್ನೂರು ಮಾಜಿ ಜಿಪಂ ಸದಸ್ಯ ಬಿ.ಎಂ. ವಾಗೀಶ್ ಸ್ವಾಮಿ, ನಗರಸಭೆ ಸದಸ್ಯ ಕೆ.ಜಿ. ಸಿದ್ದೇಶ್, ನಾಮನಿರ್ದೇಶನ ಸದಸ್ಯರಾದ ಕೆ.ಬಿ. ರಾಜಶೇಖರ್, ಸಂತೋಷ ದೊಡ್ಡಮನಿ, ಎಲ್.ಬಿ. ಹನುಮಂತಪ್ಪ, ಎಂ.ಬಿ. ಅಭಿದಾಲಿ, ನಗರಸಭೆ ಮಾಜಿ ಸದಸ್ಯ ಹಬೀಬುಲ್ಲಾ, ಜಿಗಳಿ ಆನಂದಪ್ಪ, ನಂದಿಗಾವಿ ತಿಪ್ಪೇಸ್ವಾಮಿ, ಆರ್.ಟಿ. ಪ್ರಶಾಂತ್ ದುಗ್ಗತ್ತಿಮಠ್, ಜಿ.ವಿ. ಪ್ರವೀಣ್, ರಮೇಶ್ ಗಿರಣಿ, ಮಲ್ಲೇಶ್ ಕಮಲಾಪುರ, ಪ್ರಭು ಕಕ್ಕರಗೊಳ್ಳ, ಭಾಗ್ಯಮ್ಮ, ನಾಗಮ್ಮ, ಸವಿತಾ ನಾಯ್ಕ್, ನಾರಾಯಣ, ಮಂಜುನಾಥ್ ರಟ್ಟಿಹಳ್ಳಿ, ಪ್ರಕಾಶ್, ರೆಹಮಾನ್ ಸಾಬ್ ಕುರುಬರಹಳ್ಳಿ, ಕುಂಬಳೂರು ವಾಸು, ಬಸಾಪುರ ಹರೀಶ್, ರಮೇಶ್ ನಾಯ್ಕ್ ಯಲವಟ್ಟಿ, ಯುವ ಘಟಕದ ಹಬೀಬ್, ರೆಹಮಾನ್ ಇತರರು ಹಾಜರಿದ್ದರು.

# ನೀರಾವರಿಗೆ ಒತ್ತಾಯಿಸಿ ಜಗಳೂರು ಬಂದ್ ಯಶಸ್ವಿ



**(5ನೇ ಪುಟದಿಂದ)** ಎಂದು ತಿಳಿಸಿದರು. ಭದ್ರಾ ಮೇಲ್ದಂಡೆ ಯೋಜನೆಗೆ ಕೇಂದ್ರ ಜಲ ನಿಗಮದಿಂದ ರಾಷ್ಟ್ರೀಯ ಯೋಜನೆಗೊಂಡಿರುವ ಮಾಹಿತಿಯನ್ನು ಸಂಬಂಧಿಸಿದ ಅಧಿಕಾರಿಗಳಿಂದ ಪಡೆದು ಕೇಂದ್ರ ಸರ್ಕಾರಕ್ಕೆ ಸರ್ವಪಕ್ಷಗಳ ನಿಯೋಗ ತೆರಳಲಾಗುವುದು.

ಭದ್ರಾಮೇಲ್ದಂಡೆ ಯೋಜನೆ ಕಾಮಗಾರಿಗೆ ರಾಜ್ಯ ಸರ್ಕಾರದಿಂದ 130 ಕೋಟಿ ರೂ. ಹಣ ಬಿಡುಗಡೆಯಾಗಿದೆ. ಉಳಿದ ಕಾಮಗಾರಿಗೆ ಅಗತ್ಯವಿರುವ 200 ಕೋಟಿ ರೂ. ಅನುದಾನ ಬಿಡುಗಡೆಗೆ ರಾಜ್ಯದ ಮುಖ್ಯಮಂತ್ರಿ ಹಾಗೂ ನೀರಾವರಿ ಸಚಿವರ ಬಳಿ ಜೂನ್ ನಂತರ ಸರ್ವಪಕ್ಷಗಳ ನಿಯೋಗ ಹೋಗೋಣ ಎಂದು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಹೋರಾಟ ಸಮಿತಿಯ ಪತ್ರಕರ್ತ ದೋಣೆಹಳ್ಳಿ ಗುರುಮೂರ್ತಿ, ವಕೀಲ ಆರ್.ಓಬಳೇಶ್, ಡಾ.ಅಶೋಕ್ ಕುಮಾರ್ ಸಂಗೇನಹಳ್ಳಿ, ಯಾದವ ರೆಡ್ಡಿ, ಎ.ಡಿ.ನಾಗಲಿಂಗಪ್ಪ, ಆವರಗೆರೆ ರುದ್ರಮುನಿ, ಪ್ರಗತಿಪರ ಸಂಘಟನೆಗಳ ಮುಖಂಡರುಗಳಾದ ಬಿ.ತಿಮ್ಮಾರೆಡ್ಡಿ, ಮರೇನಹಳ್ಳಿ ವಕೀಲ ಬಸವರಾಜ್, ಸಣ್ಣ ಓಬಯ್ಯ, ಮಹಾಲಿಂಗಪ್ಪ, ಓಬಣ್ಣ, ಸತೀಶ್ ಮಲೆಮಾಚಿಕೆರೆ, ರಾಜಪ್ಪ, ಧನ್ಯಕುಮಾರ್, ಮಾದಿಹಳ್ಳಿ ಮಂಜುನಾಥ್, ಅನಂತರಾಜ್, ಮೈಲೇಶ್, ಹೇಮರೆಡ್ಡಿ, ನಿಂಗಪ್ಪ, ಇಂದಿರಾ, ಕರವೇ ಸಂಘಟನೆಯ ಮಹಾಂತೇಶ್, ಲಿಂಗರಾಜ್, ರೇಖಾ, ರೈತ ಸಂಘಟನೆಯ ಮುಖಂಡರಾದ ಸಿ.ಎಂ.ಹೊಳೆ ಚಿರಂಜೀವಿ, ರಾಜು, ಲಕ್ಷ್ಮಣ, ಉಜ್ಜಿನಗೌಡ, ಪದ್ಮ, ಸತ್ಯ ಮೂರ್ತಿ, ವಕೀಲ ಹನುಮಂತಪ್ಪ, ಲುಕ್ಮಾನ್ ಖಾನ್, ಸುಧಾ, ರುದ್ರಮುನಿ, ಐರಣಿ ಚಂದ್ರು, ಪಲ್ಲಾಗಟ್ಟೆ ಶೇಖರಪ್ಪ, ಮಹೇಶ್ವರಪ್ಪ ಮುಂತಾದವರು ಇದ್ದರು.

**ಬಂದ್ ಗೆ ಬಿಜೆಪಿ ಬೆಂಬಲ:** ಸಮಗ್ರ ನೀರಾವರಿಗ ಒತ್ತಾಯಿಸಿ, ನಡೆದ ಜಗಳೂರು ಬಂದ್‌ಗೆ ಬಿಜೆಪಿ ಬೆಂಬಲ ವ್ಯಕ್ತಪಡಿಸಿದೆ.

ಮಾಜಿ ಶಾಸಕರಾದ ಎಸ್.ವಿ.ರಾಮಚಂದ್ರ, ಮತ್ತು ಹೆಚ್.ಪಿ.ರಾಜೇಶ್ ಭೇಟಿ ನೀಡಿ ಬೆಂಬಲ ವ್ಯಕ್ತಪಡಿಸಿದರು.

ನಾವು ಇಬ್ಬರೂ ಶಾಸಕರಾಗಿದ್ದಾಗ ಯೋಜನೆಗಳ ಸಾಕಾರಕ್ಕೆ ಕಾಳಜಿ ವಹಿಸಿದ್ದೇವೆ. ಆದರೆ ತಾಂತ್ರಿಕ ದೋಷದಿಂದ ಇದುವರೆಗೂ ಕಾಮಗಾರಿ ಪೂರ್ಣಗೊಂಡಿಲ್ಲ. ವಿವಿಧ ಸಂಘಟನೆಗಳ ಸಹಕಾರದಿಂದ ಭದ್ರಾ ಮೇಲ್ದಂಡೆ ಹೋರಾಟ ಸಮಿತಿಯ ಜಗಳೂರು ಬಂದ್ ಗೆ ನಮ್ಮ ಬೆಂಬಲವಿದೆ. ಹಾಲಿ ಶಾಸಕರು ರಾಜ್ಯದಲ್ಲಿ ತಮ್ಮದೇ ಆಡಳಿತ ಸರ್ಕಾರವಿದ್ದು. ಸರ್ವಪಕ್ಷಗಳ ನಿಯೋಗದೊಂದಿಗೆ ಕಾಮಗಾರಿ ತ್ವರಿತಗತಿಯಲ್ಲಿ ಪೂರ್ಣಗೊಳ್ಳಲು ಕ್ರಮಕೈಗೊಳ್ಳಬೇಕು ಎಂದು ಮಾಜಿ ಶಾಸಕ ರಾಜೇಶ್ ಮನವಿ ಮಾಡಿದರು.

# ಇಂಡಿಯ ರಿಸರ್ವ್ ಬೆಟಾಲಿಯನ್ ಸ್ಥಾಪನೆ ನನ್ನ ಆದ್ಯತೆ

**(5ನೇ ಪುಟದಿಂದ)** ಅಭಿವೃದ್ದಿ ಕೆಲಸಗಳನ್ನು ಮಾಡಿದ್ದಾರೆ. ಜಿಲ್ಲಾ ಖನಿಜ ನಿಧಿ, ಸಂಸದರ ಅನುದಾನ ಬಳಸಿಕೊಂಡು ಎಲ್ಲ ಗ್ರಾಮಗಳಲ್ಲಿ ಶಾಲಾ ಕೊಠಡಿ, ರಂಗಮಂದಿರ, ಅಂಗನವಾಡಿ ಕಟ್ಟಡ, ವ್ಯಾಯಾಮ ಶಾಲೆ, ಬಸ್ಸು ತಂಗುದಾಣ, ಸಿಮೆಂಟ್ ಕಾಂಕ್ರೀಟ್ ರಸ್ತೆಗಳನ್ನು ನಿರ್ಮಾಣ ಮಾಡಿದ್ದಾರೆ.

ಪರಿಶಿಷ್ಟ ಜನಾಂಗದವರು ಹೆಚ್ಚಾಗಿರುವ ಗ್ರಾಮಗಳನ್ನು ಪ್ರಧಾನಮಂತ್ರಿ ಆದರ್ಶ ಗ್ರಾಮ ಯೋಜನೆಯಡಿ ಅಭಿವೃದ್ಧಿ ಪಡಿಸಿದ್ದಾರೆ. ಜಲ್ ಜೀವನ್ ಮಿಷನ್ ಯೋಜನೆಯಡಿ ಪ್ರತಿ ಗ್ರಾಮಗಳಿಗೂ ನಲ್ಲಿ ಮೂಲಕ ಶುದ್ಧ ಕುಡಿಯುವ ಸರಬರಾಜು ಮಾಡಿದ್ದಾರೆ. ಗ್ರಾಮ ಸಡಕ್ ಯೋಜನೆಯಡಿ ಗ್ರಾಮಾಂತರ ಭಾಗಗಳಲ್ಲಿ ರಸ್ತೆಗಳನ್ನು ನಿರ್ಮಾಣ ಮಾಡಿದ್ದಾರೆ. ಮರಿಯಮ್ಮನಹಳ್ಳಿಯಿಂದ-ಹರಪನಹಳ್ಳಿ-ಹರಿಹರ ವರೆಗಿನ ರಾಜ್ಯ ಹೆದ್ದಾರಿಯನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮೇಲ್ದರ್ಜೆಗೇರಿಸಿದ್ದು, ಶೀಘ್ರವಾಗಿ ಹೆದ್ದಾರಿಯನ್ನು ಅಭಿವೃದ್ದಿಪಡಿಸಲಾಗುವುದು ಎಂದರು.

ಮಾಜಿ ಸಚಿವ ಜಿ.ಕರುಣಾಕರ ರೆಡ್ಡಿ ಮಾತನಾಡಿ, ಇದೊಂದು ಮಹತ್ತರವಾದ ಚುನಾವಣೆ. ಸ್ವಾತಂತ್ರ್ಯ ಬಂದು ಇಷ್ಟು ವರ್ಷವಾದರೂ ಆಗದ ಅಭಿವೃದ್ಧಿ ಕೆಲಸಗಳನ್ನು ನರೇಂದ್ರ ಮೋದಿ ಅವರು 2014 ರಿಂದಿಚೀಗೆ ಮಾಡಿ ತೋರಿಸಿದ್ದಾರೆ. ಕೇವಲ 10 ವರ್ಷಗಳಲ್ಲಿ ಮೋದಿ ಜೀ ಅವರು ವಿಶ್ವ ನಾಯಕರಾಗಿ ಗುರುತಿಸಿಕೊಂಡಿದ್ದಾರೆ ಎಂದರು.

ನರೇಂದ್ರ ಮೋದಿ ಅವರು 2014 ರಲ್ಲಿ ಪ್ರಥಮ ಬಾರಿಗೆ ಪ್ರಧಾನ ಮಂತ್ರಿ ಆದ ಮೇಲೆ ಜನ್ ಧನ್ ಖಾತೆ ಪ್ರಾರಂಭ ಮಾಡಿದರು. ಆಗ ಸಾಕಷ್ಟು ಮಂದಿ ಜನ್ - ಧನ್ ಖಾತೆ ಏಕೆ ? ಎಂದು ಪ್ರಶ್ನೆ ಮಾಡಿದರು. ಕೇಂದ್ರ ಹಾಗೂ ರಾಜ್ಯ ಸರ್ಕಾರದ ಯೋಜನೆಗಳ ಹಣ ಯಾವುದೇ ಮಧ್ಯವರ್ತಿಗಳಿಲ್ಲದೆ ನೇರವಾಗಿ ಫಲಾನುಭವಿಗಳ ಖಾತೆಗೆ ಜಮೆ ಆಗುವ ನಿಟ್ಟಿನಲ್ಲಿ ಜನ್-ಧನ್ ಖಾತೆ ಉಪಯುಕ್ತವಾಗಿದೆ. ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರ ಇದ್ದಾಗ ಅಲ್ಲಿ 100 ರೂಪಾಯಿ ಬಿಡುಗಡೆಯಾದರೆ ಜನರಿಗೆ ಕೇವಲ 15 ರೂಪಾಯಿ ಸಿಗುತ್ತಿತ್ತು. ಮೋದಿ ನೇತೃತ್ವದ ಕೇಂದ್ರ ಸರ್ಕಾರ ಅಲ್ಲಿ 100 ರೂಪಾಯಿ ಬಿಡುಗಡೆ ಮಾಡಿದರೆ ಫಲಾನುಭವಿಗೆ 100 ರೂಪಾಯಿ ಸಿಗುತ್ತಿದೆ. ಮುಂದೆಯೂ ನರೇಂದ್ರ ಮೋದಿ ಅವರು ಪ್ರಧಾನಿಯಾದರೆ ದೇಶ ಸುಭದ್ರ, ಸುಭಿಕ್ಷವಾಗಿ ಇರುತ್ತದೆ ಎಂದರು.

ಬಿಜೆಪಿ ಮುಖಂಡರಾದ ಕಡ್ಲೆಬಾಳು ಧನಂಜಯ್, ಜಿ.ಎಸ್.ಅಶ್ವಿನಿ, ಲೋಕೇಶ್, ಶೇಖರಪ್ಪ, ಕಲ್ಲನಗೌಡ, ಮಂಜುನಾಥ್, ವೀರಭದ್ರಪ್ಪ, ಮಹಾಂತೇಶ್, ಬಸವರಾಜ್, ಹೇಮಣ್ಣ, ಅಂಜಿನಪ್ಪ, ನಾಗರಾಜ್, ವೀರಣ್ಣ, ಮಂಡಲ ಅಧ್ಯಕ್ಷರು, ಮಂಡಲ ಸದಸ್ಯರು, ಗ್ರಾಮ ಪಂಚಾಯಿತಿ ಸದಸ್ಯರು, ಬೂತ್ ಮಟ್ಟದ ಅಧ್ಯಕ್ಷರು, ಸದಸ್ಯರು, ಗ್ರಾಮದ ಬಿಜೆಪಿ ಮುಖಂಡರು ಇದ್ದರು.

## ಮೋದಿ ಬಡವರ, ಶ್ರೀಸಾಮಾನ್ಯ ಪರ

ಪ್ರಧಾನಿ ನರೇಂದ್ರ ಮೋದಿ ಅವರು ಬಡವ, ಶ್ರೀಸಾಮಾನ್ಯರ ಪರವಾಗಿ ನಿಂತು ಸಾಕಷ್ಟು ಯೋಜನೆಗಳನ್ನು ರೂಪಿಸಿದ್ದಾರೆ. ಕೋವಿಡ್ ಸಮಯದಲ್ಲಿ ಎಲ್ಲರಿಗೂ ಎರಡು ಬಾರಿ ಡೋಸ್ ನೀಡಿದ್ದಲ್ಲದೆ, ಬೂಸ್ಟರ್ ಡೋಸ್ ಕೂಡ ಕೊಡಿಸಿದರು. ಉಚಿತವಾಗಿ ಪಡಿತರ ನೀಡಿದರು. ಬಡವ, ಶ್ರೀಸಾಮಾನ್ಯರಿಗೆ ದೊಡ್ಡ ದೊಡ್ಡ ಕಾಯಿಲೆ ಬಂದರೆ ಸಾಲ-ಸೋಲ ಮಾಡಿ ಸಂಕಷ್ಟಕ್ಕೆ ಸಿಲುಕಿ ಆಸ್ತಿ ಪಾಸ್ತಿ ಮಾರಿಕೊಳ್ಳುವ ಪರಿಸ್ಥಿತಿ ಇತ್ತು. ಅದನ್ನು ಮನಗಂಡು ಮೋದಿ ಅವರು ಆಯುಷ್ಮಾನ್ ಭಾರತ್‌ಯೋಜನೆ ಜಾರಿಗೊಳಿಸಿ 5 ಲಕ್ಷ ರೂಪಾಯಿವರೆಗೂ ಉಚಿತ ಚಿಕಿತ್ಸೆ ಕೊಡಿಸುತ್ತಿದ್ದಾರೆ. ಮೋದಿ ಅವರು ಮತ್ತೊಮ್ಮೆ ಪ್ರಧಾನಿಯಾದರೆ ಬಡವ, ಶ್ರೀಸಾಮಾನ್ಯರ ಪರ ಇನ್ನಷ್ಟು ಕೆಲಸಗಳನ್ನು ಮಾಡಲು ಅವಕಾಶ ಮಾಡಿಕೊಟ್ಟಂತಾಗುತ್ತದೆ. ಎಲ್ಲ ಕಾರ್ಯಕರ್ತರು ಮೋದಿ ಜೀ ಹಾಗೂ ಸಂಸದ ಜಿ.ಎಂ.ಸಿದ್ದೇಶ್ವರ್ ಅವರ ಸಾಧನೆಗಳನ್ನು ಮನೆ ಮನೆಗೆ ತಲುಪಿಸಿ ಗಾಯತ್ರಿ ಸಿದ್ದೇಶ್ವರ್ ಅಕ್ಕ ಅವರನ್ನು ಗೆಲ್ಲಿಸಬೇಕು ಎಂದು ಮಾಜಿ ಸಚಿವ ಜಿ.ಕರುಣಾಕರ ರೆಡ್ಡಿ ಮನವಿ ಮಾಡಿದರು.

# ಕಾಂಗ್ರೆಸ್‌ಗೆ 2019ಕ್ಕಿಂತ ಹೆಚ್ಚು ಸ್ಥಾನ

**(5ನೇ ಪುಟದಿಂದ)** ಸೀಟು ಗಳಿಸಲಿವೆ. ಕರ್ನಾಟಕ ಹಾಗೂ ತೆಲಂಗಾಣಗಳಲ್ಲಿ ಕಾಂಗ್ರೆಸ್ ಸರ್ಕಾರಗಳು ಜನಪ್ರಿಯವಾಗಿವೆ. ಕಾಂಗ್ರೆಸ್ 2019ಕ್ಕಿಂತ ಹೆಚ್ಚು ಸ್ಥಾನ ಗಳಿಸಲಿದೆ ಎಂದು ಚಿದಂಬರಂ ಹೇಳಿದ್ದಾರೆ. 2019ರ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ 52 ಸ್ಥಾನ ಗಳಿಸಿತ್ತು. ಕಾಂಗ್ರೆಸ್ ತನ್ನ ಸಾಧನೆಯಲ್ಲಿ ದೊಡ್ಡ ಬೆಳವಣಿಗೆ ಕಾಣಲಿದೆ. ಹರಿಯಾಣ, ಉತ್ತರ ಪ್ರದೇಶ, ಬಿಹಾರ, ಜಾರ್ಖಂಡ್ ಹಾಗೂ ದೆಹಲಿಯಲ್ಲೂ ಐ.ಎನ್.ಡಿ.ಐ.ಎ. ಮೈತ್ರಿಕೂಟಕ್ಕೆ ಪ್ರೋತ್ಸಾಹಕಾರಿ ವರದಿ ಬರುತ್ತಿದೆ ಎಂದವರು ಹೇಳಿದ್ದಾರೆ.

# ನಾಯಿಕೊಡೆಗಳಂತೆ ಬೇಸಿಗೆ ಶಿಬಿರಗಳು

**(5ನೇ ಪುಟದಿಂದ)** ಶಿಬಿರಗಳಲ್ಲಿರುವ ಶಿಕ್ಷಕರು ಎಂತವರು? ಅವರ ನಡವಳಿಕೆ ಹೇಗಿದೆ? ಮಕ್ಕಳಿಗೆ ಬೇಕಾದ ಪೂರಕ ವಾತಾವರಣ ಇದೆಯೇ? ಎಂಬ ಬಗ್ಗೆ ಪೋಷಕರು ಚಿಂತಿಸಬೇಕು. ಎಲ್ಲಾ ಕಡೆಯೂ ಹಣ ಗಳಿಕೆಯೇ ಮುಖ್ಯವಾಗಿರುವುದಿಲ್ಲ. ಆದರೆ ಅಂತಹ ಶಿಬಿರಗಳನ್ನು ಹುಡುಕಿ ಕಳುಹಿಸುವುದು ಹೆತ್ತವರ ಕರ್ತವ್ಯ ಸಹ. ಸದಾ ತಂತ್ರಜ್ಞಾನದ ನಡುವೆ ಬೆಳೆಯುವ ಮಕ್ಕಳಿಗೆ ಬೇಸಿಗೆ ಶಿಬಿರದಲ್ಲಿ ಪ್ರಕೃತಿಯ ಮಧ್ಯೆ ಸಮಯ ಕಳೆಯಲು ಸಾಧ್ಯವಾಗುತ್ತದೆ. ಪ್ರಕೃತಿಯು ಎಲ್ಲಾ ಇಂದ್ರಿಯಗಳನ್ನು ಪ್ರಚೋದಿಸುತ್ತದೆ. ಇದು ದೈಹಿಕ, ಮಾನಸಿಕ ಮತ್ತು ಭಾವನಾತ್ಮಕ ಆರೋಗ್ಯಕ್ಕೆ ಅಗತ್ಯವಾಗಿದೆ. ಈ ಹಿನ್ನೆಲೆಯಲ್ಲಿ ಕರಾಟೆ, ಡ್ಯಾನ್ಸ್, ಏರೋಬಿಕ್ಸ್ ಬದಲು ಪ್ರಕೃತಿಯೊಂದಿಗೆ ಬೆರೆಯುವಂತಹ ಅಥವಾ ಯೋಗ, ಧ್ಯಾನ, ಸಾಂಪ್ರದಾಯಿಕ ಅಟಗಳನ್ನು ಆಡಿಸುವಂತಹ ಶಿಬಿರಗಳು ಮಕ್ಕಳಿಗೆ ಸೂಕ್ತ ಅಲ್ಲವೇ?


**WALK IN INTERVIEW**

*Applications are invited for the following post*


- English Teacher BA., B.Ed., (English Major)
- Social Teacher BA., B.Ed., (English Major)
- Hindi Teacher Hindi B.Ed.,
- Mathematics Teacher B.Sc., B.Ed.,
- Physical Education (PE) Teacher BPEd.,

*For more details Contact :*

**80738 45050**

**ಮಕ್ಕಳ ಉಚಿತ ದಂತ ತಪಾಸಣಾ ಶಿಬಿರ**

ಯಾವಾಗ :
ಏಪ್ರಿಲ್ 01 ರಿಂದ ಮೇ 31ರವರೆಗೆ
ಯಾರಿಗೆ : ನವಜಾತ ಶಿಶುವಿನಿಂದ 15 ವರ್ಷದ ಮಕ್ಕಳವರೆಗೆ
ಎಲ್ಲಿ : ಅರಿವು ಡೆಂಟಲ್ ಕ್ಲಿನಿಕ್ ದಾವಣಗೆರೆ.
ಸಮಯ : ಬೆಳಗ್ಗೆ 10.30 ರಿಂದ ಸಂಜೆ 5.30ರವರೆಗೆ



ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : **ಅರಿವು ಡೆಂಟಲ್ ಕ್ಲಿನಿಕ್**
1ನೇ ಮಹಡಿ, ಸಂದೀಪ್ ನರ್ಸಿಂಗ್ ಹೋಂ ಹತ್ತಿರ, ಟೂನ್ಜ್ ಮಕ್ಕಳ ಅಂಗಡಿ ಎದುರು, 7ನೇ ಕ್ರಾಸ್, 7ನೇ ಮುಖ್ಯ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ-2. ಮೊ. : 7676298958, 7019688355


**Briquettes machine ಆಪರೇಟರ್ ಬೇಕಾಗಿದ್ದಾರೆ**

Hydraulic ಮತ್ತು Ram ಟೈಪ್ ಮಿಷನ್ ಆಪರೇಟ್ ಮಾಡಲು ನುರಿತ ಕೆಲಸಗಾರರು ಬೇಕಾಗಿದ್ದಾರೆ.
ಇಎಸ್ಐ, ಪಿಎಫ್ ಸೌಲಭ್ಯ ಮತ್ತು ಬೋನಸ್ ಹಾಗೂ ಗ್ರಾಚ್ಯೂಟಿ ಸೌಲಭ್ಯವಿದೆ. ಕೂಡಲೇ ಸಂಪರ್ಕಿಸಿ.
ವಿಳಾಸ : ನಂ. 80/1, ಹನಗವಾಡಿ ಇಂಡಸ್ಟ್ರೀಯರ್ ಏರಿಯಾ, ಹರಿಹರ
**ಮೊ: 8553030333, 8105550005**



# ಹೃದಯಪೂರ್ವಕ ಕೃತಜ್ಞತೆಗಳು






**ಶ್ರೀಮತಿ ಜ್ಯೋತಿ ಬಾಯಿ ಲಿಂಗರಾಜ್‌ನಾಯ್ಕ**
**ಅಧ್ಯಕ್ಷರು, ಗ್ರಾಮ ಪಂಚಾಯಿತಿ, ಕಾಡಜ್ಜಿ.**

ನನ್ನನ್ನು ಕಾಡಜ್ಜಿ ಗ್ರಾಮ ಪಂಚಾಯಿತಿಗೆ ನೂತನ ಅಧ್ಯಕ್ಷರನ್ನಾಗಿ ಅವಿರೋಧವಾಗಿ ಆಯ್ಕೆ ಮಾಡಲು ಸಹಕರಿಸಿದ ಹಿರಿಯ ಶಾಸಕರರಾದ **ಶ್ರೀಯುತ ಡಾ. ಶಾಮನೂರು ಶಿವಶಂಕರಪ್ಪನವರಿಗೂ,** ಕರ್ನಾಟಕ ಸರ್ಕಾರದ ಗಣಿ, ಭೂ ವಿಜ್ಞಾನ ಮತ್ತು ತೋಟಗಾರಿಕೆ ಸಚಿವರು ಮತ್ತು ಜಿಲ್ಲಾ ಉಸ್ತುವಾರಿ ಸಚಿವರಾದ **ಸನ್ಮಾನ್ಯ ಎಸ್.ಎಸ್. ಮಲ್ಲಿಕಾರ್ಜುನ್‌ರವರಿಗೂ**
**ಶ್ರೀ ಮುದೇಗೌಡ್ರ ಗಿರೀಶ್,** ಡಿಸಿಸಿ ಬ್ಯಾಂಕ್ ನಿರ್ದೇಶಕರು, **ಶ್ರೀ ಕರಿಸಬಪ್ಪ,** ಡಿಸಿಸಿ ಬ್ಯಾಂಕ್ ನಿರ್ದೇಶಕರು, ಬೇತೂರು.
**ಶ್ರೀ ಬಿ.ಕೆ. ಪರಶುರಾಮ್,** ಉತ್ತರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು ಮಾಗಾನಹಳ್ಳಿ., **ಶ್ರೀ ಪ್ರಭಣ್ಣ,** ಎಪಿಎಂಸಿ ಮಾಜಿ ಸದಸ್ಯರು,
**ಶ್ರೀ ಚಂದ್ರಣ್ಣ,** ಕಾಡಜ್ಜಿ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷರು, **ಶ್ರೀ ಬೂದಾಳು ಬಾಬು,** ಕಾಂಗ್ರೆಸ್ ಮುಖಂಡರು ಹಾಗೂ
**ಕಾಡಜ್ಜಿ ಗ್ರಾಮ ಪಂಚಾಯ್ತಿ ಉಪಾಧ್ಯಕ್ಷರು ಮತ್ತು ಸರ್ವ ಸದಸ್ಯರುಗಳಿಗೆ ಹಾಗೂ**
**ಕಾಡಜ್ಜಿ, ನಾಗರಕಟ್ಟೆ, ಪುಟಗನಾಳು ಸಮಸ್ತ ಗ್ರಾಮಸ್ಥರಿಗೂ ನನ್ನ ಹೃದಯಪೂರ್ವಕ ಕೃತಜ್ಞತೆಗಳು...**

**ಕಾಡಜ್ಜಿ ಗ್ರಾ.ಪಂಚಾಯ್ತಿ ಸದಸ್ಯರು**



ನಾಗಮ್ಮ ಪುಟಗನಾಳು | ಕಮಲಮ್ಮ, ಕಾಡಜ್ಜಿ | ರತ್ನಮ್ಮ ಪುಟಗನಾಳು | ಮಾರಮ್ಮ ಪುಟಗನಾಳು | ಶೈಲಮ್ಮ, ಕಾಡಜ್ಜಿ | ಮಂಜಮ್ಮ, ನಾಗರಕಟ್ಟೆ | ಸಿದ್ದಿಕ್‌ಬಾನು, ಕಾಡಜ್ಜಿ



ವೇದಮೂರ್ತಿ ನಾಗರಕಟ್ಟೆ | ದೇವರಾಜ್ ನಾಗರಕಟ್ಟೆ | ಶಬ್ಬಿರ್ ಸಾಬ್ ಕಾಡಜ್ಜಿ. | ಕೆಂಚಪ್ಪ ಕಾಡಜ್ಜಿ. | ರಾಜಣ್ಣ ಪುಟಗನಾಳು | ಉಮೇಶಯ್ಯ ಕಾಡಜ್ಜಿ | ಈರಣ್ಣ ಕಾಡಜ್ಜಿ | ಸಿದ್ದೇಶ್ ಪುಟಗನಾಳು



**ಲಿಂಗರಾಜ್ ನಾಯ್ಕ**
ಯುವ ಕಾಂಗ್ರೆಸ್ ಮುಖಂಡರು,
ಎಸ್.ಡಿ.ಎಂ.ಸಿ. ಅಧ್ಯಕ್ಷರು, ನಾಗರಕಟ್ಟೆ




KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas